ಸಂಪುಟ: 01 ಸಂಚಿಕೆ: 04 ಪುಟ: 04 ಬೆಲೆ: 02 ಭಾನುವಾರ ಜೂನ್ 07 2026 ಮೊ: 7411699198/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಸತ್ಯದ ಧ್ವನಿ... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಜನರ ನುಡಿ....

ಕನ್ನಡ ದಿನ ಪತ್ರಿಕೆ




Volume:01 Issue:04 Pages:04 Price:02 SUNDAY JUNE 07 2026 RNI NO: KNKAN/26/A4008 E-mail:ajathashathru2026@gmail.com

## ಬಿಜೆಪಿ ತೊರೆದು ಬಂದ ಅಣ್ಣಾಮಲೈಗೆ ತಮಿಳುನಾಡಿನಲ್ಲಿ ಭರ್ಜರಿ ಸ್ವಾಗತ

ಅ.ಶ. ಸುದ್ದಿ ಚೆನ್ನೈ

**ಚೆನ್ನೈ: ಬಿಜೆಪಿ ತೊರೆದು ಸ್ಥಳೀಯ ಪಕ್ಷ ರಚನೆ ಮಾಡಿರುವ ಸಿಂಗಂ ಖ್ಯಾತಿಯ ಅಣ್ಣಾಮಲೈಗೆ ತಮಿಳುನಾಡಿನಲ್ಲಿ ಭರ್ಜರಿ ಸ್ವಾಗತ ಸಿಕ್ಕಿದೆ.ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಬೀಡುಬಿಟ್ಟಿದ್ದ ಅಣ್ಣಾಮಲೈ ಬಿಜೆಪಿ ಪಕ್ಷಕ್ಕೆ ರಾಜೀನಾಮೆ ನೀಡಿ ಹಿಂತಿರುಗುತ್ತಿದ್ದಂತೆ ಅವರಿಗೆ ಅಭಿಮಾನಿಗಳು ಭರ್ಜರಿ ಸ್ವಾಗತ ಕೋರಿದ್ದಾರೆ.**



ಬಿಜೆಪಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಅಣ್ಣಾಮಲೈ ನೀಡಿರುವ ರಾಜೀನಾಮೆಯನ್ನು ಬಿಜೆಪಿ ಅಂಗೀಕರಿಸಿದೆ. ಈ ಮೂಲಕ ಕಳೆದ ಮೂರು ದಿನಗಳಿಂದ ನಡೆಯುತ್ತಿದ್ದ ಹಗ್ಗ-ಜಗ್ಗಾಟ ಅಂತ್ಯಗೊಂಡಿದೆ. ರಾಜೀನಾಮೆ ಅಂಗೀಕಾರವಾಗುತ್ತಿದ್ದಂತೆ ದೆಹಲಿಯಿಂದ ಚೆನ್ನೈಗೆ ಆಗಮಿಸಿದ ಅಣ್ಣಾಮಲೈ ಭರ್ಜರಿ ಸ್ವಾಗತ ಸಿಕ್ಕಿದೆ. ಬಿಜೆಪಿಗೆ ರಾಜೀನಾಮೆ ನೀಡಿದ್ದ-ರಿಂದ ಸಂತಸಗೊಂಡಿರುವ ಬೆಂಬಲಿಗರು ಹಾಗೂ ಅಭಿಮಾನಿಗಳು ಅಣ್ಣಾಮಲೈ ಅವರನ್ನು ಅದ್ದೂರಿಯಾಗಿ ಬರಮಾಡಿಕೊಂಡಿದ್ದಾರೆ. ಇದೇ ಹುಮಸ್ಸಿನಲ್ಲಿ ಅವರು ಹೊಸ ರಾಜಕೀಯ ಪಕ್ಷ ರಚನೆ ಮಾಡಿಕೊಂಡು ತಮ ಮುಂದಿನ ಭವಿಷ್ಯ ರೂಪಿಸಿಕೊಳ್ಳಲು ನಿರ್ಧರಿಸಿದ್ದಾರೆ.

## ನಾರ್ವೆ ಚೆಸ್ ಪ್ರಶಸ್ತಿ ಗೆದ್ದು ಹೊಸ ಇತಿಹಾಸ ಬರೆದ ಪ್ರಗ್ನಾನಂದ

ಅ.ಶ. ಸುದ್ದಿ ಓಸ್ಲೋ

**ಓಸ್ಲೋ: ನಾರ್ವೆ ಚೆಸ್ ಪ್ರಶಸ್ತಿ ಗೆದ್ದು ಭಾರತೀಯ ಗ್ರ್ಯಾಂಡ್ ಮಾಸ್ಟರ್ ಪ್ರಗ್ನಾನಂದ ಇತಿಹಾಸ ಸೃಷ್ಟಿಸಿದ್ದಾರೆ.ಇಲ್ಲಿ ನಡೆದ ಪ್ರತಿಷ್ಠಿತ ನಾರ್ವೆ ಚೆಸ್ ಪ್ರಶಸ್ತಿಯನ್ನು ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪ್ರಗ್ನಾನಂದ ಪಾತ್ರರಾದರು. ಇಲ್ಲಿ ನಡೆದ ಅಂತಿಮ ಸುತ್ತಿನ ಪಂದ್ಯದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ ವಿರುದ್ಧ ಜಯಗಳಿಸಿ ಅದ್ಭುತ ಅಭಿಯಾನವನ್ನು ಅವರು ಪೂರ್ಣಗೊಳಿಸಿದರು.**

15 ಅಂಕಗಳೊಂದಿಗೆ ಮೂರನೇ ಸ್ಥಾನದೊಂದಿಗೆ ದಿನವನ್ನು ಪ್ರಾರಂಭಿಸಿದ ಪ್ರಗ್ನಾನಂದ, ಅತ್ಯಂತ ಮುಖ್ಯವಾದ ಪ್ರದರ್ಶನ ನೀಡಿದರು, ಮೂರು ಪೂರ್ಣ ಅಂಕಗಳನ್ನು ಗಳಿಸುವ ಶಾಸ್ತ್ರೀಯ ಗೆಲುವು ಸಾಧಿಸಿದರು ಮತ್ತು 18 ಅಂಕಗಳೊಂದಿಗೆ ಮುಗಿಸಿದರು ಮತ್ತು ಎಲೈಟ್ ಚೆಸ್‌ನಲ್ಲಿ ಅತ್ಯಂತ ಅಪೇಕ್ಷಿತ ಟ್ರೋಫಿಗಳಲ್ಲಿ ಒಂದನ್ನು ಗೆದ್ದರು. ಹಾಗೆ ಮಾಡುವುದರ ಮೂಲಕ, 20 ವರ್ಷದ ಚೆನ್ನೈ ಆಟಗಾರ 2013 ರಲ್ಲಿ ಪಂದ್ಯಾವಳಿ ಪ್ರಾರಂಭವಾದಾಗಿನಿಂದ ಭಾರತೀಯ ಚೆಸ್ ದಂತಕಥೆ ವಿಶ್ವನಾಥನ್ ಆನಂದ್ ಮತ್ತು ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಸೇರಿದಂತೆ ಇತರರನ್ನು ಸಹ ತಪ್ಪಿಸಿದ ಸಾಧನೆಯನ್ನು ಸಾಧಿಸಿದರು.

ನಾರ್ವೆ ಚೆಸ್‌ನಲ್ಲಿ ಎರಡನೇ ಬಾರಿಗೆ ಸ್ಪರ್ಧಿಸುತ್ತಿರುವ ಪ್ರಗ್ನಾನಂದ, ಈವೆಂಟ್‌ನ ದ್ವಿತೀಯಾರ್ಧದಲ್ಲಿ ಆವೇಗವನ್ನು ಪಡೆಯುವ ಮೊದಲು ಎಲೈಟ್ ಆರು ಆಟಗಾರರ ಕ್ಷೇತ್ರದಲ್ಲಿ ನಿಧಾನಗತಿಯ ಆರಂಭವನ್ನು ಅನುಭವಿಸಿದರು.ಏಳು ಬಾರಿಯ ನಾರ್ವೆ ಚೆಸ್ ಚಾಂಪಿಯನ್ ಮತ್ತು ವಿಶ್ವದ ನಂಬರ್ ಒನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಕ್ಲಾಸಿಕಲ್ ಚೆಸ್‌ನಲ್ಲಿ ಎರಡು ಬಾರಿ ಸೋಲಿಸಿದ್ದರು. ಈ ಅಪರೂಪದ ಸಾಧನೆಯು ಈ ವರ್ಷದ



ಆರಂಭದಲ್ಲಿ ಪಾಫೋಸ್‌ನಲ್ಲಿ ನಡೆದ ಅಭ್ಯರ್ಥಿಗಳ ಪಂದ್ಯಾವಳಿಯ ನಿರಾಶೆಯಿಂದ ಚೇತರಿಸಿಕೊಳ್ಳುವ ಅವರ ದೃಢಸಂಕಲ್ಪವನ್ನು ಒತ್ತಿಹೇಳುತ್ತದೆ.ವಿಶ್ವ ಚಾಂಪಿಯನ್ ಗುಕೇಶ್ ಅಂತಿಮ ಹಂತದಲ್ಲಿ ಸ್ಪರ್ಧೆಯಿಂದ ಹೊರಗುಳಿದ ಕಾರಣ, ಪ್ರಗ್ನಾನಂದ ಭಾರತದ ಸವಾಲು ಜೀವಂತವಾಗಿರುವುದನ್ನು ಖಚಿತಪಡಿಸಿಕೊಂಡರು, ಅಂತಿಮವಾಗಿ ಅದನ್ನು ಪ್ರಶಸ್ತಿಯವರೆಗೂ ಕೊಂಡೊಯ್ದರು.

ಅಂತಿಮ ಸುತ್ತಿಗೆ ಪ್ರವೇಶಿಸುವ ಮೊದಲು 15.5 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಮುನ್ನಡೆಸಿದ್ದ ಅಮೇ-ರಿಕನ್ ಗ್ರ್ಯಾಂಡ್‌ಮಾಸ್ಟ್ ವೆಸ್ಲಿ ಸೋ, ಅಲಿರೆಜಾ ಫಿರೌಜ್ಜಾ ವಿರುದ್ಧದ ತಮ್ಮ ಕ್ಲಾಸಿಕಲ್ ಪಂದ್ಯದಲ್ಲಿ ಡ್ರಾ ಸಾಧಿಸಿ, ಅವರ ಸ್ಪರ್ಧೆಯನ್ನು ಆರ್ಮಗೆಡ್ಡೋನ್ ಟೈ-ಬ್ರೇಕ್‌ಗೆ ಕಳುಹಿಸಿದ ನಂತರ ಈ ಫಲಿತಾಂಶ ಸಾಧ್ಯವಾಯಿತು. ಕೀಮರ್ ವಿರುದ್ಧದ ಕ್ಲಾಸಿಕಲ್ ಗೆಲುವು ತನ್ನನ್ನು ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಕೊಂಡೊಯ್ಯುತ್ತದೆ ಮತ್ತು ಹೆಗ್ಗುರುತು ಪ್ರಶಸ್ತಿಯನ್ನು ಖಚಿತಪಡಿಸುತ್ತದೆ ಎಂದು ತಿಳಿದಿದ್ದ ಪ್ರಗ್ನಾನಂದಗೆ ಆ ಫಲಿತಾಂಶವು ಬಾಗಿಲು ತೆರೆಯಿತು.ವೆಸ್ಲಿ ಸೋ ಆರ್ಮಗೆಡ್ಡೋನ್ ಟೈ-ಬ್ರೇಕ್ ಗೆದ್ದರೂ, ಈ ಗೆಲುವು ಕೇವಲ 1.5 ಅಂಕಗಳಷ್ಟಿತ್ತು, ಅವರ ಅಂಕಗಳ ಸಂಖ್ಯೆ 17ಕ್ಕೆ ತಲುಪಿತು ಪ್ರಜ್ಞಾನಂದ ಅವರ ಗೆಲುವಿನ ಒಟ್ಟು 18 ಅಂಕಗಳಿಗಿಂತ ಒಂದು ಕಡಿಮೆ.

ಪ್ರಶಸ್ತಿಯ ಭರವಸೆಯೊಂದಿಗೆ ಅಂತಿಮ ಸುತ್ತಿಗೆ ಪ್ರವೇಶಿಸಿದ್ದ ಅಲಿರೆಜಾ 15.5 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಏತನ್ಮಧ್ಯೆ, ಗುಕೇಶ್ ಅವರ ನಿರಾಶಾದಾಯಕ ಅಭಿಯಾನ ಮುಂದುವರೆಯಿತು, ಏಕೆಂದರೆ ಅವರು ಚಾಲೆಂಜರ್ ಜಾವೋಖಿ-ರ್ ಸಿಂದಾರೋವ್ ವಿರುದ್ಧ ತಮ್ಮ ವಿಶ್ವ ಪ್ರಶಸ್ತಿಯನ್ನು ಉಳಿಸಿಕೊಳ್ಳಲು ಸಿದ್ಧರಾಗಿರುವ ಒಂದು ವರ್ಷದಲ್ಲಿ ಅವರು ನಿರೀಕ್ಷಿಸಿದ್ದ ಪ್ರಗತಿಯಿಲ್ಲದೆ ಪಂದ್ಯಾವಳಿಯಲ್ಲಿ ಅವರ ಮೂರನೇ ಪ್ರದರ್ಶನವು ಕೊನೆಗೊಂಡಿತು. ಅಂತಿಮ ಸುತ್ತಿನಲ್ಲಿ, ಬಿಳಿ ಕಾಯಿಗಳೊಂದಿಗೆ ಆಡುವ ಕಾರ್ಲ್‌ಸನ್, 20 ವರ್ಷದ ಭಾರತೀಯ ಆಟಗಾರನನ್ನು ಕ್ಲಾಸಿಕ್ ಪಂದ್ಯದಲ್ಲಿ ಸೋಲಿಸಿ ಮೂರು ಪೂರ್ಣ ಅಂಕಗಳನ್ನು ಗಳಿಸಿದರು. ಆದಾಗ್ಯೂ, ಈ ಗೆಲುವು ನಾರ್ವೇಜಿಯನ್ ಶ್ರೇಷ್ಠ ಆಟಗಾರನನ್ನು ಪ್ರಶಸ್ತಿ ಸ್ಪರ್ಧೆಗೆ ತಳ್ಳಲು ಸಾಕಾಗಲಿಲ್ಲ, ಏಕೆಂದರೆ ಅವರು 13 ಅಂಕಗಳೊಂದಿಗೆ ಐದನೇ ಸ್ಥಾನ ಪಡೆದರು.

## ಪ್ಲಾಸ್ಟಿಕ್ ನೋಟುಗಳನ್ನು ಪರಿಚಯಿಸಲು ಆರ್‌ಬಿಐ ಚಿಂತನೆ

ಅ.ಶ. ಸುದ್ದಿ ಮುಂಬೈ

**ಮುಂಬೈ: ಶೀಘ್ರದಲ್ಲೇ ದೇಶದ ಪಾಲಿಮರ್ ಇಲ್ಲವೇ ಪ್ಲಾಸ್ಟಿಕ್ ನೋಟುಗಳ ಚಲಾವಣೆಗೆ ಬರುವ ಸಾಧ್ಯತೆಗಳಿವೆ.ಪ್ಲಾಸ್ಟಿಕ್ ನೋಟುಗಳನ್ನು ದೇಶದ ಜನರಿಗೆ ಪರಿಚಯಿಸುವ ಪ್ರಸ್ತಾಪವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಪರಿಗಣಿಸಿದೆ ಎಂದು ತಿಳಿದುಬಂದಿದೆ. ಪಾಲಿಮರ್ ನೋಟುಗಳನ್ನ ಜಾರಿಗೊಳಿಸಲು ನಾವು ಚಿಂತನೆ ನಡೆಸುತ್ತಿದ್ದೇವೆ. ಇದರ ಸಾಧಕ ಬಾಧಕಗಳ ಬಗ್ಗೆ ನಾವು ಪರಿಶೀಲನೆ ನಡೆಸುತ್ತಿದ್ದೇವೆ. ಈ ಪ್ರಸ್ತಾಪವು ಸದ್ಯ ಪ್ರಾಥಮಿಕ ಹಂತದಲ್ಲಿದ್ದು, ಯಾವುದೇ ಅಂತಿಮ ನಿರ್ಧಾರ ಕೈಗೊಂಡಿಲ್ಲ. ನಿರ್ಧಾರ ತೆಗೆದುಕೊಂಡ ಬಳಿಕ ಅಧಿಕೃತ ಮಾಹಿತಿ ನೀಡುತ್ತೇವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸ್ಪಷ್ಟನೆ ನೀಡಿದ್ದಾರೆ.**



ಏನಿದು ಪಾಲಿಮರ್ ನೋಟು?ನಾವು ದಿನನಿತ್ಯ ಬಳಸುವ ಕಾಗದದ ನೋಟುಗಳಿಗಿಂತ ಇವು ಸಂಪೂರ್ಣ ಭಿನ್ನ. ತೆಳುವಾದ, ಸುಲಭವಾಗಿ ಮಡಚಬಹುದಾದ ಮತ್ತು ದೀರ್ಘಕಾಲಿಕ ಬಾಳಿಕೆ ಬರುವ ನೋಟುಗಳು. ಕಾಗದದ ನೋಟುಗಳ ಮುದ್ರಣದ ವೆಚ್ಚ ತೀವ್ರವಾಗಿ ಹೆಚ್ಚಳವಾಗುತ್ತಿರುವುದರಿಂದ ಮತ್ತು ಪ್ರತಿ ವರ್ಷ ಹರಿದ ನೋಟುಗಳನ್ನ ಚಲಾವಣೆಯಿಂದ ಹಿಂಪಡೆಯುತ್ತಿರುವುದನ್ನು ತಡೆಯಲು ಆರ್‌ಬಿಐ ಈ ಪ್ರಮುಖ ನಿರ್ಧಾರ ಕೈಗೊಳ್ಳಲು ಮುಂದಾಗಿದೆ ಎನ್ನಲಾಗಿದೆ. ಪ್ಲಾಸ್ಟಿಕ್ ನೋಟುಗಳ ಪರಿಚಯ ಭಾರತಕ್ಕೆ ಹೊಸದೇನಲ್ಲ. 2014ರಲ್ಲೇ ಕೇಂದ್ರ ಸರ್ಕಾರವು ದೇಶದ ವಿವಿಧೆಡೆ ಈ ಪ್ರಯೋಗ ನಡೆಸಿತ್ತು. ದೇಶದ 5 ಪ್ರಮುಖ ನಗರಗಳಾದ ಮೈಸೂರು, ಕೊಚ್ಚಿ, ಜೈಪುರ, ಶಿಮ್ಲಾ ಮತ್ತು ಭುವನೇಶ್ವರಗಳಲ್ಲಿ ಪ್ರಾಯೋಗಿಕವಾಗಿ 10 ರೂ. ಮುಖಬೆಲೆಯ 100 ಕೋಟಿ ಪ್ಲಾಸ್ಟಿಕ್ ನೋಟುಗಳನ್ನು ಚಲಾವಣೆಗೆ ತರಲಾಗುವುದು ಎಂದು ಸರ್ಕಾರ ಸಂಸತ್ತಿಗೆ ತಿಳಿಸಿತ್ತು.ಪ್ರಸ್ತುತ ಆರ್‌ಬಿಐ ಈ ಯೋಜನೆಯನ್ನು ದೇಶಾದ್ಯಂತ ಜಾರಿಗೆಗೊಳಿಸಲು ಚಿಂತನೆ ನಡೆಸುತ್ತಿದ್ದು, ಮುಂದಿನ ದಿನಗಳಲ್ಲಿ ನಮ್ಮ ಕೈಗೆ ಕಾಗದದ ನೋಟುಗಳ ಬದಲು ಪ್ಲಾಸ್ಟಿಕ್ ನೋಟುಗಳು ಬಂದರೂ ಅಚ್ಚರಿಪಡಬೇಕಾಗಿಲ್ಲ.




## ಶಾಲಾ ಫಲಿತಾಂಶ ಹೆಚ್ಚಳಕ್ಕೆ ಶ್ರಮಿಸಿದ ಶಿಕ್ಷಕರಿಗೆ ಸನ್ಮಾನ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ನಗರದ ಬನ್ನಿಕಟ್ಟಿ ಸಮೀಪದ ವಿಜಯನಗರ ಪ್ರೌಢ ಶಾಲೆಯಲ್ಲಿ 2026ನೇ ಸಾಲಿನ ಶೇ.100ರಷ್ಟು ಶಾಲಾ ಫಲಿತಾಂಶ ಸಾಧನೆಗೆ ಶ್ರಮಿಸಿದ ಶಿಕ್ಷಕರಿಗೆ ಗೌರವ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಯಿತು.**

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶಾಲೆಯ ಮುಖ್ಯೋಪಾಧ್ಯಾಯರಾದ ಶೀಲಾ ಎಂ. ಎಚ್. ಅವರು, “ಶಿಕ್ಷಣ ಸಂಸ್ಥೆಯ ಏಳ್ಗೆಯಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಯೊಂದಿಗೆ ಶಾಲೆಯ ಉತ್ತಮ ಫಲಿತಾಂಶ ಸಾಧನೆಗೆ ಶಿಕ್ಷಕರು ಶ್ರಮಿಸಿದ್ದಾರೆ. ಅವರ ಸೇವೆಯನ್ನು ಗೌರವಿಸುವುದು ಹೆಮ್ಮೆಯ ಸಂಗತಿ,” ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಸೋಮನಾಥ, ಮಂಜುಳಾ, ರಶ್ಮಿ, ಅಂಜು, ಸಹನ ಹಾಗೂ ಹನುಮಂತಿ



ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಬಸವರಾಜ ಹಳ್ಳಿಕೇರಿ, ಪಾಲಕರ ಪ್ರತಿನಿಧಿ ನಾಗರಾಜ್ ಯತ್ನಟ್ಟಿ, ಸಂಸ್ಥೆಯ ಅಧ್ಯಕ್ಷ ಮಲ್ಲಿಕಾರ್ಜುನ್ ಎಸ್.ಎಚ್., ಕಾರ್ಯದರ್ಶಿ ಹಾಗೂ ಮುಖ್ಯೋಪಾಧ್ಯಾಯರಾದ ಶೀಲಾ ಎಂ.ಎಚ್., ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸರ್ವೋದಯ CBSC ಶಾಲೆಗೆ ಚಾಲನೆ ನೀಡಿದ ನಾಗರತ್ನ ಪಾಟೀಲ್

### 2026-27ನೇ ಸಾಲಿಗೆ ಅನುಮೋದನೆ ಪಡೆದ ಏಕೈಕ ಶಾಲೆ ಎಂಬ ಹೆಗ್ಗಳಿಕೆ: ರಾಜ ಸುಭಾಷ್‌ಚಂದ್ರ ನಾಯಕ ಮಾನ್ವಿ

ಅ.ಶ. ಸುದ್ದಿ ಮಾನ್ವಿ

**ಶಿಕ್ಷಣ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಆರಂಭಿಸುವ ಮೂಲಕ ಮಾನ್ವಿ ಪಟ್ಟಣದ ಸರ್ವೋದಯ ಸಿಬಿಎಸ್‌ಇ ಶಾಲೆಯ 2026-27ನೇ ಶೈಕ್ಷಣಿಕ ವರ್ಷದ ಶಾಲಾ ಉದ್ಘಾಟನಾ ಸಮಾರಂಭವು ಬುಧವಾರ ಅದ್ದೂರಿಯಾಗಿ ನಡೆಯಿತು. ನಾಗಲಾಂಬಿಕೆ ಪಟ್ಟಣ ಸಹಕಾರ ಬ್ಯಾಂಕ್ ಅಧ್ಯಕ್ಷೆ ಶ್ರೀಮತಿ ನಾಗರತ್ನ ಪಾಟೀಲ್ ಅವರು ಶಾಲೆಯನ್ನು ಉದ್ಘಾಟಿಸಿ ನೂತನ ಶೈಕ್ಷಣಿಕ ವರ್ಷದ ಆರಂಭಕ್ಕೆ ಚಾಲನೆ ನೀಡಿದರು.**

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಸರ್ವೋದಯ ಶಿಕ್ಷಣ ಸಂಸ್ಥೆ ಕೈಗೊಂಡಿರುವ ಪ್ರಯತ್ನಗಳು ಶ್ಲಾಘನೀಯವಾಗಿದ್ದು, ಇಂತಹ ಶಿಕ್ಷಣ ಸಂಸ್ಥೆಗಳು ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತವೆ ಎಂದು ಹೇಳಿದರು. ಕಾರ್ಯಕ್ರಮದ ಗೌರವ ಅತಿಥಿಯಾಗಿ ಭಾಗವಹಿಸಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷ ರಾಜ ಸುಭಾಷ್‌ಚಂದ್ರ ನಾಯಕ ಮಾತನಾಡಿ, “ಮಾನ್ವಿ ಪಟ್ಟಣದಲ್ಲಿ 2026-27ನೇ ಸಾಲಿನಲ್ಲಿ ಸಿಬಿಎಸ್‌ಇ ಮಾನ್ಯತೆ ಪಡೆದ ಏಕೈಕ ಶಾಲೆ ಎಂಬ ಹೆಗ್ಗಳಿಕೆಗೆ ಸರ್ವೋದಯ ಸಿಬಿಎಸ್‌ಇ ಶಾಲೆ ಪಾತ್ರವಾಗಿದೆ.

ಗ್ರಾಮೀಣ ವಿದ್ಯಾರ್ಥಿಗಳಿಗೂ ರಾಷ್ಟ್ರೀಯ ಮಟ್ಟದ ಶಿಕ್ಷಣ ಸಿಗಬೇಕು ಎಂಬ ಆಶಯದಿಂದ ಸಂಸ್ಥೆ ಕಾರ್ಯನಿರ್ವ ಹಿಸುತ್ತಿರುವುದು ಸಂತಸದ ವಿಷಯವಾಗಿದೆ” ಎಂದು ಹೇಳಿದರು. ಮತ್ತೋರ್ವ ಗೌರವ ಅತಿಥಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಮಾಜಿ ಅಧ್ಯಕ್ಷ ಸರ್ಫುದ್ದೀನ್ ಮಾತನಾಡಿ, “ಮಾ ಫ್ರೆಂಡ್ಸ್ ಸಂಸ್ಥೆಯು ಸಮಾಜ-ಕ್ಕೆ ಉತ್ತಮ ಶಿಕ್ಷಣ ಎಂಬ ಅಮೂಲ್ಯ ಕೊಡುಗೆಯನ್ನು ನೀಡುತ್ತಿದೆ. ಕೇವಲ ಶಾಲೆ ನಿರ್ಮಿಸುವುದಲ್ಲ, ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಕಾರ್ಯವನ್ನು ಮಾಡುತ್ತಿದೆ. ಇಂತಹ ಶಿಕ್ಷಣ ಸಂಸ್ಥೆಗಳು ಸಮಾಜದ ಪ್ರಗತಿಗೆ ಬಲವಾದ



ಅಡಿಪಾಯವಾಗಿವೆ” ಎಂದು ಅಭಿಪ್ರಾಯಪಟ್ಟರು. ಸಂಸ್ಥೆಯ ಸಂಸ್ಥಾಪಕರಾದ ಒಂಂ ಫ್ರೆಂಡ್ಸ್ ಮಾತನಾಡಿ, “ಮಾನ್ವಿ ನಗರದಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ನಾವು ಸದಾ ಬದ್ಧರಾಗಿದ್ದೇವೆ.

ಆಧುನಿಕ ಸೌಲಭ್ಯಗಳು, ಅನುಭವಿ ಶಿಕ್ಷಕರ ಬಳಗ ಹಾಗೂ ಮೌಲ್ಯಾಧಾರಿತ ಶಿಕ್ಷಣದ ಮೂಲಕ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸುವಂತೆ ರೂಪಿಸುವುದು ನಮ್ಮ ಗು-ರಿಯಾಗಿದೆ”. ಶಿಕ್ಷಣದ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೇ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಆದ್ಯತೆ ನೀಡಲಾಗುತ್ತಿದೆ ಎಂದರು. ಶಾಲೆಯ ಪ್ರಾಚಾರ್ಯರಾದ ಜೋಸೆಫ್ ಎಸ್. ಬೈಲಾ ಮಾತನಾಡಿ, “ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ನಾವು ಸಂಪೂರ್ಣ ಬದ್ಧರಾಗಿದ್ದೇವೆ. ಶೈಕ್ಷಣಿಕ ಸಾಧನೆಯ ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ, ನೈತಿಕ ಮೌಲ್ಯಗಳು ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವತ್ತ ವಿಶೇಷ ಗಮನ ಹರಿಸಲಾಗುತ್ತದೆ” ಎಂದು ಹೇಳಿದರು. ಸಿಬಿಎಸ್‌ಇ, ನವದೆಹಲಿ ಮಾನ್ಯತೆ (ಅಫಿಲಿಯೇಷನ್ ಸಂಖ್ಯೆ 831728) ಪಡೆದಿರುವ ಸರ್ವೋದಯ ಸಿಬಿಎಸ್‌ಇ ಶಾಲೆಯು ಆಧುನಿಕ ತರಗತಿ ಕೊಠಡಿಗಳು, ಸುಸಜ್ಜಿತ ಪ್ರಯೋಗಾಲಯಗಳು, ಡಿಜಿಟಲ್ ಶಿಕ್ಷಣ ವ್ಯವಸ್ಥೆ, ಕ್ರೀಡಾ ಸೌಲಭ್ಯಗಳು ಹಾಗೂ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ವಿಧಾನಗಳ ಮೂಲಕ ಈಗಾಗಲೇ ಪೋಷಕರ ಮೆಚ್ಚುಗೆ ಗಳಿಸಿದೆ.

ಕಾರ್ಯಕ್ರಮದಲ್ಲಿ ಆಡಳಿತ ಅಧಿಕಾರಿ ದತ್ತಾತ್ರೇಯ ಮೇಟಿ, ಸರ್ವೋದಯ ಪ್ಯಾರಮೆಡಿಕಲ್ ಮತ್ತು ನರ್ಸಿಂಗ್ ಪ್ರಾಚಾರ್ಯರಾದ ಶಿವಕುಮಾರ, ಸರ್ವೋದಯ ಫಾರ್ಮಸಿ ಕಾಲೇಜಿನ ಪ್ರಾಚಾರ್ಯರಾದ ನವೀನ್ ಕುಮಾರ್, ಶಿಕ್ಷಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಣ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಶಾಲೆಯ ಹೊಸ ಶೈಕ್ಷಣಿಕ ವರ್ಷದ ಆರಂಭವು ಹಬ್ಬದ ವಾತಾವರಣದಲ್ಲಿ ನಡೆಯಿತು. ಮಾನ್ವಿಯ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಭರವಸೆಯಾಗಿ ಹೊರಹೊಮ್ಮಿರುವ ಸರ್ವೋದಯ ಸಿಬಿಎಸ್‌ಇ ಶಾಲೆಯು ರಾಷ್ಟ್ರೀಯ ಮಟ್ಟದ ಶಿಕ್ಷಣವನ್ನು ಗ್ರಾಮೀಣ ವಿದ್ಯಾರ್ಥಿಗಳಿಗೆ ತಲುಪಿಸುವ ಮೂಲಕ ಶಿಕ್ಷಣ ಕ್ರಾಂತಿಗೆ ನಾಂದಿ ಹಾಡಿದೆ ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು ಅಭಿಪ್ರಾಯಪಟ್ಟರು.

# ಪೊಲೀಸ್ ಠಾಣೆ ಆವರಣದಲ್ಲಿ ಪರಿಸರ ದಿನಾಚರಣೆ

ಅ.ಶ. ಸುದ್ದಿ ರಾಯಚೂರು

**ರಾಯಚೂರು: ಪರಿಸರ ದಿನಾಚರಣೆಯ ಅಂಗವಾಗಿ ಪೊಲೀಸ್ ಠಾಣೆ ಆವರಣದಲ್ಲಿ ಸಸಿ ನೆಟ್ಟ ದಕ್ಷ ಪ್ರಾಮಾಣಿಕ ಅಧಿಕಾರಿ ಡಿ ವೈ ಎಸ್ ಪಿ ಶಾಂತವೀರ್ ಸಸಿ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಡಿವೈ ಎಸ್ ಪಿ ಶಾಂತವೀರ್ ಮನುಷ್ಯರು ತಮ್ಮ ಸ್ವಾರ್ಥಕ್ಕೆ ಅರಣ್ಯ ನಾಶ ಮಾಡುತ್ತಿದ್ದಾರೆ.**



ಇದರಿಂದ ಸರಿಯಾದ ಸಮಯಕ್ಕೆ ಮಳೆ ಯಾಗದೇ ಹಲವು ಪ್ರಕೃತಿಕ ವಿಕೋಪ ಸಹ ಸಂಭವಿಸುತ್ತಿವೆ. ಇನ್ನೂ ಕೆಲವು ರೋಡು ಅಗಲೀಕರಣಕ್ಕೆ ಮರಗಳ ಮಾರಣ ಹೋಮ ಸಹ ಆಗುತ್ತಿದೆ ಇದು ಹೀಗೆ ಮುಂದುವರೆದರೆ ಮುಂದೊಂದುದಿನ ಇಡೀ ಸಮಾಜವೇ ನಾಶವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.ಪ್ರತಿಯೊಬ್ಬರೂ ಸಸಿ ನೆಡುವ ಮೂಲಕ ಮಾದರಿಯಾಗಬೇಕು

# ಹನುಮಾನ್ ಮಂದಿರದಲ್ಲಿ ನಮಾಜ್ ಮಾಡಿದವರ ವಿರುದ್ಧ ಎಫ್‌ಐಆರ್

ಅ.ಶ. ಸುದ್ದಿ ಬುಲಂದ್‌ಶಹರ್

**ಬುಲಂದ್‌ಶಹರ್: ಉತ್ತರಪ್ರದೇಶದ ಹಳ್ಳಿಯೊಂದರ ಹನುಮಾನ್ ದೇವಸ್ಥಾನದೊಳಗೆ ವ್ಯಕ್ತಿಯೊಬ್ಬ ನಮಾಜ್ ಮಾಡುತ್ತಿರುವ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ಭಾರಿ ವೈರಲ್ ಆಗಿದೆ.ಈ ವಿಷಯ ಭಾರಿ ಸದ್ದು ಮಾಡುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ಪೊಲೀಸರು ನಮಾಜ್ ಮಾಡಿದ ಮೂವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**



ಸಂಪಾದಕೀಯ ವಿಭಾಗ ಪ್ರವೇಶ

ಪೊಲೀಸರ ಪ್ರಕಾರ, ಮೇ 31 ರಂದು ಔರಂಗಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಅಸರ್ ಮೊಹಮ್ಮದ್ ತನ್ನ ಸಹಚರ ನಜರ್ ಮೊಹಮ್ಮದ್ ಮತ್ತು ಇತರರೊಂದಿಗೆ ರಾಜ್‌ಕುಮಾರ್ ಅವರ ಮನೆಗೆ ಕಲ್ಲು ಕೆಲಸ ಮಾಡಲು ಹೋಗಿದ್ದರು. ಸ್ವಲ್ಪ ಸಮಯದವರೆಗೆ ಕೆಲಸ ಮಾಡಿದ ನಂತರ, ಕಾರ್ಮಿಕರು ಊಟದ ವಿರಾಮವನ್ನು ತೆಗೆದುಕೊಂಡರು, ಆ ಸಮಯದಲ್ಲಿ ಅಸರ್ ಮೊಹಮ್ಮದ್ ಸಣ್ಣ ಮಳೆಯ ನಡುವೆಯೂ ದೇವಾಲಯದೊಳಗೆ ನಮಾಜ್ ಮಾಡಿದ್ದರು ಎಂದು ಹೇಳಲಾಗುತ್ತದೆ. ಆ ಸಮಯದಲ್ಲಿ ನಜರ್ ಮೊಹಮ್ಮದ್ ಸ್ಥಳದಲ್ಲಿದ್ದರು. ಆಪಾದಿತ ಘಟನೆಯ ವೀಡಿಯೊವನ್ನು ನಂತರ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡಲಾಯಿತು, ಇದು ಗ್ರಾಮಸ್ಥರಲ್ಲಿ ಅಸಮಾಧಾನವನ್ನು ಉಂಟುಮಾಡಿತು.ತನಿಖೆಯ ಸಮಯದಲ್ಲಿ, ಘಟನೆಗಳ ಅನುಕ್ರಮವು ಪ್ರಾಥಮಿಕವಾಗಿ ಸರಿಯಾಗಿದೆ ಎಂದು ಪೊಲೀಸರು ಕಂಡುಕೊಂಡರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೂಜಾ ಸ್ಥಳವನ್ನು ಅಪವಿತ್ರಗೊಳಿಸುವ ಮೂಲಕ ಹಿಂದೂ ಸಮುದಾಯದ ಧಾರ್ಮಿಕ ಭಾವನೆಗಳನ್ನು ಅವಮಾನಿಸುವ ಗುರಿಯನ್ನು ಈ ಕೃತ್ಯ ಹೊಂದಿದೆ ಎಂದು ಪೊಲೀಸರು ಆರೋಪಿಸಿದ್ದಾರೆ. ಔರಂಗಾಬಾದ್‌ನ ಎಸ್‌ಎಸ್‌ಒ ಮೊಹಮ್ಮದ್ ಅಸ್ಲಾಂ ಅವರು ಎಫ್‌ಐಆರ್ ದಾಖಲಿಸಲಾಗಿದ್ದು, ಈ ವಿಷಯ ತನಿಖೆಯಲ್ಲಿದೆ ಎಂದು ತಿಳಿಸಿದ್ದಾರೆ.

# ನಿತ್ಯವೂ ಪರಿಸರ ಸಂರಕ್ಷಣೆಗೆ ಮುಂದಾಗಿ : ಪಿಡಿಓ ಸುರೇಶ ಚಲವಾದಿ ಹೇಳಿಕೆ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಉತ್ತಮ ಆರೋಗ್ಯ ಹೊಂದಲು ನಮ್ಮ ಸುತ್ತಮುತ್ತ ಸ್ವಚ್ಛ, ಸುಂದರ ಪರಿಸರ ನಿರ್ಮಿಸುವುದು ಅತ್ಯಗತ್ಯವಾಗಿದೆ ಎಂದು ವಡ್ಡರಹಟ್ಟಿ ಗ್ರಾಮ ಪಂಚಾಯತ್ ಪಿಡಿಓ ಸುರೇಶ ಚಲವಾದಿ ಅವರು ಹೇಳಿದರು.**



ತಾಲೂಕಿನ ವಡ್ಡರಹಟ್ಟಿ ಗ್ರಾಪಂ ಕಾರ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶೇಷ ಗ್ರಾಮಸಭೆಯಲ್ಲಿ ಕಾರ್ಯಕ್ರಮದಲ್ಲಿ ಮಾತನಾಡಿದರು. ವರ್ಷದ ಒಂದು ದಿನ ಬದಲಿಗೆ ನಿತ್ಯವೂ ಪರಿಸರ ಸಂರಕ್ಷಣೆಗಾಗಿ ಮುಂದಾಗಬೇಕು. ಶಾಲಾ ಶಿಕ್ಷಕರು ಹಾಗೂ ಪಾಲಕರು ಮಕ್ಕಳಿಗೆ ಬಾಲ್ಯದಲ್ಲೇ ಪರಿಸರ ಕಾಳಜಿ ಬಗ್ಗೆ ಜಾಗೃತಿ ಮೂಡಿಸಬೇಕು. ಪ್ರತಿಯೊಬ್ಬರೂ ಮನೆಗೊಂದು ಸಸಿ ನೆಡಬೇಕು ಎಂದರು. ಗ್ರಾಮ ಪಂಚಾಯತ್ ಆವರಣ ಸೇರಿ ವಿವಿಧೆಡೆ ಸಸಿ ನೆಡಲಾಯಿತು. ಈ ವೇಳೆ, ಗ್ರಾಪಂ ಕಾರ್ಯದರ್ಶಿಗಳಾದ ಈಶಪ್ಪ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಪಂ ಸಿಬ್ಬಂದಿಗಳು ಸೇರಿ ಇತರರಿದ್ದರು.

# ಕರ್ನಾಟಕ ರಾಜ್ಯ ವಿಪ್ರ ಫೋಟೋ ಮತ್ತು ವೀಡಿಯೋಗ್ರಾಫರ್ಸ್ ಅಸೋಸಿಯೇಷನ್‌ನ ವಾರ್ಷಿಕ ಸರ್ವ ಸದಸ್ಯರ ಸಭೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕರ್ನಾಟಕ ರಾಜ್ಯ ವಿಪ್ರ ಫೋಟೋ ಮತ್ತು ವೀಡಿಯೋಗ್ರಾಫರ್ಸ್ ಅಸೋಸಿಯೇಷನ್‌ನ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (AKBMS) ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.**



ಸಭೆಯ ನಂತರ 2026–27ನೇ ಸಾಲಿನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಚುನಾವಣೆಯು ಚುನಾವಣಾಧಿಕಾರಿ ಬಾಬು ಜಿ.ಎಸ್. ಅವರ ಸಮ್ಮುಖದಲ್ಲಿ ಮತದಾನದ ಮೂಲಕ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ರಮೇಶ್ ಬಿ.ಕೆ. ಅವರು ಆಯ್ಕೆಯಾದರು. ಕಾರ್ಯದರ್ಶಿಯಾಗಿ ಪ್ರದೀಪ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಹ ಕಾರ್ಯದರ್ಶಿಯಾಗಿ ಸುಧೀರ್ ಹೆಬ್ಬಾರ್ ಹಾಗೂ ಖಜಾಂಚಿಯಾಗಿ ಪ್ರಸನ್ನ ಕುಲಕರ್ಣಿ ಅವರು ಆಯ್ಕೆಯಾದರು. ಸಂಘದ ನಿರ್ದೇಶಕರಾಗಿ ಆರ್.ಜಿ. ಭಟ್, ಪ್ರಸನ್ನ ಎನ್.ಎಸ್., ಕಾಶಿ ಸುಬ್ರಮಣ್ಯ, ಚಂದ್ರಶೇಖರ ಎಸ್. ಆರ್., ಜೂಪಿಟರ್ ಮಂಜುನಾಥ್, ರಮೇಶ್ ಭಟ್, ಸತ್ಯಪ್ರಕಾಶ್, ರಾಘವೇಂದ್ರ ರಾವ್, ಶ್ರೀನಿವಾಸ್ ವೈ.ಕೆ., ಆರ್. ಕೃಷ್ಣ ಹಾಗೂ ಲಕ್ಷ್ಮೀಕಾಂತ್ ಆರ್. ಅವರನ್ನು ಆಯ್ಕೆ ಮಾಡಲಾಯಿತು.

ಕಾರ್ಯಕ್ರಮದ ಅಂಗವಾಗಿ ರಾಜ್ಯದ ವಿವಿಧ ಜಿಲ್ಲೆಗಳ ವಿಪ್ರ ಛಾಯಾಗ್ರಾಹಕರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಎಸ್. ರಘುನಾಥ್ ಅವರು ಪ್ರಶಸ್ತಿಗಳನ್ನು ವಿತರಿಸಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಅವರ ಪೋಷಕರಿಗೆ ಹಾಗೂ ಶಿಕ್ಷಕರಿಗೆ ಶುಭಾಶಯಗಳನ್ನು ಕೋರಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಛಾಯಾಗ್ರಾಹಕರ ಸಂಘಟನೆ ಮತ್ತು ಮಹಾಸಭೆಯ ನಡುವೆ ದೀರ್ಘಕಾಲದ ಆತ್ಮೀಯ ಸಂಬಂಧವಿದ್ದು, ಸಂಘದ ಚಟುವಟಿಕೆಗಳಿಗೆ ಮಹಾಸಭೆ ನಿರಂತರವಾಗಿ ಸಹಕಾರ ನೀಡುತ್ತಾ ಬಂದಿದೆ. ಮುಂದೆಯೂ ಎಲ್ಲ ರೀತಿಯ ಬೆಂಬಲ ಮತ್ತು ಸಹಕಾರವನ್ನು ನೀಡಲಾಗುವುದು ಎಂದು ಭರವಸೆ ವ್ಯಕ್ತಪಡಿಸಿದರು.

ನೂತನ ಅಧ್ಯಕ್ಷರಾದ ರಮೇಶ್ ಬಿ.ಕೆ. ಅವರು ಮಾತನಾಡಿ, ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ವಿಪ್ರ ಛಾಯಾಗ್ರಾಹಕರು ಹಾಗೂ ವೀಡಿಯೋಗ್ರಾಫರ್ಸ್‌ಗಳು ಸಂಘದ ಸದಸ್ಯರಾಗಿ ಸೇರ್ಪಡೆಗೊಂಡು ಸಂಘಟನೆಯ ಬಲವರ್ಧನೆಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಸಂಘಟನೆಯ ಮೂಲಕ ವೃತ್ತಿಪರರ ಹಿತಾಸಕ್ತಿ ಕಾಪಾಡುವ ಜೊತೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕೈಗೊಳ್ಳುವ ಸಂಕಲ್ಪವನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರು, ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಛಾಯಾಗ್ರಾಹಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಸಾಮೂಹಿಕ ವಿದ್ಯುತ್ ಬಿಲ್ ಬಾಕಿ ವಸೂಲಾತಿ ಅಭಿಯಾನ,,

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಅವಧಿ ಮೀರಿದ್ದರೂ ವಿದ್ಯುತ್ ಶುಲ್ಕ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಂದ ವಿದ್ಯುತ್ ಬಾಕಿ ವಸೂಲಾತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ ಗಂಗಾವತಿ ಹಮ್ಮಿಕೊಂಡಿರುವ ಸಾಮೂಹಿಕ ವಿದ್ಯುತ್ ಬಿಲ್ ಬಾಕಿ ವಸೂಲಾತಿ ಅಭಿಯಾನ ಸಾಮೂಹಿಕ ವಿದ್ಯುತ್ ಬಿಲ್ ಬಾಕಿ ವಸೂಲಾತಿ ಅಭಿಯಾನ ನಡೆಸಲಾಗುತ್ತಿದೆ.**



ಈ ಅಭಿಯಾನದಲ್ಲಿ ಎಲ್ಲ ಪ್ರವರ್ಗದ ವಿದ್ಯುತ್ ಗ್ರಾಹಕರು, ಸರ್ಕಾರಿ ಇಲಾಖೆ ಒಳಗೊಂಡಂತೆ ನಿಗದಿತ ಅವಧಿಯೊಳಗೆ ವಿದ್ಯುತ್ ಶುಲ್ಕ ಬಾಕಿ ಪಾವತಿಸದ ಮೀಟರ್/ಮಾಪಕಗಳ ವಿದ್ಯುತ್ ಸಂಪರ್ಕವನ್ನು ಯಾವುದೇ ಮುನ್ಸೂಚನೆ ನೀಡದೆ ಕಡಿತಗೊಳಿಸಲಾಗುವುದು. ಆದ್ದರಿಂದ ಅವಧಿ ಮೀರಿದ್ದರೂ ವಿದ್ಯುತ್ ಶುಲ್ಕ ಹಾಗೂ ಹೆಚ್ಚುವರಿ ಭದ್ರತಾ ಠೇವಣಿ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಮೀಟರ್/ಮಾಪಕಗಳ ವಿದ್ಯುತ್ ಶುಲ್ಕವನ್ನು ಜೆಸ್ಕಾಂ ಅಧಿಕೃತ ನಗದು ಕೌಂಟರ್ ಅಥವಾ ಆನ್ ಲೈನ್ ಮೂಲಕ ಕೂಡಲೇ ಪಾವತಿಸುವಂತೆ ಕೋರಲಾಗಿದೆ.

ಈ ಮೂಲಕ ವಿದ್ಯುತ್ ಕಡಿತಗೊಳಿಸುವ ಕ್ರಮಕ್ಕೆ ಆಸ್ಪದ ನೀಡದಂತೆ ಗ್ರಾಹಕರು ಸಹಕರಿಸಬೇಕೆಂದು ವಿ.ಮಂಜುನಾಥ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ ಗಂಗಾವತಿ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಪ್ರಧಾನಿ ಮೋದಿ ಕರೆಗೆ ಕಾಂಗ್ರೆಸ್ ಶಾಸಕ ಕೆ.ಎನ್. ರಾಜಣ್ಣ ಸಾಥ್

ಅ.ಶ. ಸುದ್ದಿ ಮಧುಗಿರಿ

**ಮಧುಗಿರಿ: ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ತಾಯಿಯ ಹೆಸರಿನಲ್ಲಿ ಒಂದು ಮರ ಬೆಳೆಸಿ ಎಂಬ ಪರಿಸರ ಕಾಳಜಿಯ ಕರೆಗೆ ಶಾಸಕ ಕೆ.ಎನ. ರಾಜಣ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.**



ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆಗಾಗಿ ಪ್ರಧಾನಿ ಮೋದಿ ನೀಡಿರುವ ಈ ಸಲಹೆ ಅತ್ಯಂತ ಅರ್ಥಪೂರ್ಣವಾಗಿದೆ ಎಂದು ಶ್ಲಾಘಿಸಿದರು. ನಾವು ವಿರೋಧ ಪಕ್ಷದವರು ಎಂದ ಮಾತ್ರಕ್ಕೆ ಎಲ್ಲವನ್ನೂ ವಿರೋಧಿಸಬೇಕಾಗಿಲ್ಲ. ಸಮಾಜದ ಹಿತದೃಷ್ಟಿಯಿಂದ ಯಾರೇ ಒಳ್ಳೆಯ ಸಲಹೆ ನೀಡಿದರೂ ಅದನ್ನು ಸ್ವೀಕರಿಸಿ ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ಪಕ್ಷ ರಾಜಕಾರಣವನ್ನು ಮರೆತು ಪರಿಸರ ಸಂರಕ್ಷಣೆಯಂತಹ ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಪ್ರತಿಯೊಬ್ಬರೂ ತಮ್ಮ ತಾಯಿಯ ಹೆಸರಿನಲ್ಲಿ ಕನಿಷ್ಠ ಒಂದು ಮರವನ್ನು ನೆಟ್ಟು ಬೆಳೆಸುವ ಮೂಲಕ ಪರಿಸರ ರಕ್ಷಣೆಗೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು. ಮುನಿಯಪ್ಪ ರಾಜೀನಾಮೆ ನೀಡುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಸಚಿವ ಸಂಪುಟದಲ್ಲಿ ಖಾತೆ ಹಂಚಿಕೆ ಮತ್ತು ರಾಜಕೀಯ ಅವಕಾಶಗಳ ಬಗ್ಗೆ ಮಾತನಾಡಿದರು. ಈಶ್ವರ ಖಂಡ್ರೆ ಅವರಿಗೆ ಯಾಕೆ ಅದೇ ಖಾತೆ ಕೊಡಲಿಲ್ಲ? ಪರಮೇಶ್ವರ್ ಅವರಿಗೆ ಗೃಹ ಖಾತೆ ನೀಡಬೇಕಿತ್ತು, ಯಾಕೆ ಕಂದಾಯ ಖಾತೆ ನೀಡಿದ್ದಾರೆ? ಇವೆಲ್ಲವೂ ಕಾಲಾನುಸಾರ ಬದಲಾಗುವ ರಾಜಕೀಯ ನಿರ್ಧಾರಗಳು ಎಂದರು. ನೋಡಿ, ಯಾವ ಹುದ್ದೆಯೂ ಯಾರೊಬ್ಬರ ಸ್ವತ್ತಲ್ಲ. ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ಅವಕಾಶಗಳು ದೊರೆಯುತ್ತವೆ. ಆ ಅವಕಾಶಗಳನ್ನು ತಮ ಬುದ್ಧಿಶಕ್ತಿ ಮತ್ತು ಅನುಭವ ಬಳಸಿ ಜನಪರ ಕೆಲಸಗಳಿಗೆ ಬಳಸಿಕೊಳ್ಳಬೇಕು ಎಂದು ಕೆ.ಎನ್. ರಾಜಣ್ಣ ತಿಳಿಸಿದರು.

## ಚಾಮರಾಜನಗರ ನಗರಸಭೆಗೆ ಜಿಲ್ಲಾಧಿಕಾರಿ ಶ್ರೀರೂಪ ದಿಢೀರ್ ಭೇಟಿ; ಅರ್ಜಿಗಳ ತ್ವರಿತ ವಿಲೇವಾರಿಗೆ ಕಟ್ಟುನಿಟ್ಟಿನ ಸೂಚನೆ



ಅ.ಶ. ಸುದ್ದಿ ಚಾಮರಾಜನಗರ

**ಚಾಮರಾಜನಗರ: ಜಿಲ್ಲಾಧಿಕಾರಿ ಶ್ರೀರೂಪ ಅವರು ಇಂದು ಮಧ್ಯಾಹ್ನದ ಬಳಿಕ ಚಾಮರಾಜನಗರ ನಗರಸಭೆ ಕಚೇರಿಗೆ ದಿಢೀರ್ ಭೇಟಿ ನೀಡಿ, ಕಚೇರಿಯ ಕಾರ್ಯವೈಖರಿ ಹಾಗೂ ಸಾರ್ವಜನಿಕರಿಂದ ಸ್ವೀಕರಿಸಲಾದ ಅರ್ಜಿಗಳ ವಿಲೇವಾರಿ ಪ್ರಗತಿಯನ್ನು ಪರಿಶೀಲಿಸಿದರು.**

ಪರಿಶೀಲನೆ ವೇಳೆ ಸಾರ್ವಜನಿಕರ ಅರ್ಜಿಗಳ ವಿಲೇವಾರಿ ನಿರೀಕ್ಷಿತ ಮಟ್ಟದಲ್ಲಿ ನಡೆಯದೇ ಅನಗತ್ಯ ವಿಳಂಬವಾಗುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಯವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸಾರ್ವಜನಿಕರ ಅರ್ಜಿಗಳು ಹಾಗೂ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು. ಕಾಲಮಿತಿಯೊಳಗೆ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ವಿಳಂಬ ಧೋರಣೆ ಸಹಿಸಲಾಗುವುದಿಲ್ಲ ಎಂದು ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಟ್ಟುನಿಟ್ಟಿನ ತಾಕೀತು ನೀಡಿದರು. ಸಾರ್ವಜನಿಕರಿಗೆ ಸಮಯೋಚಿತ, ಪಾರದರ್ಶಕ ಮತ್ತು ಗುಣಮಟ್ಟದ ಸೇವೆ ಒದಗಿಸುವುದು ಆಡಳಿತದ ಮೂಲ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ಯಾವುದೇ ನಿರ್ಲಕ್ಷ್ಯ ಕಂಡುಬಂದರೆ ಗಂಭೀರ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ನಂತರ ನಗರಸಭೆ ಕಚೇರಿಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ನಗರಸಭೆ ಆಯುಕ್ತರಾದ ಪರಶುರಾಮ್ ಛಲವಾದಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ್, ಪರಿಸರ ಎಂಜಿನಿಯರ್ ರೂಪ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

**ವರದಿ: ಅನಿಲ್ ಕುಮಾರ್ ಗೂಳಿಪುರ**

# ಕಾನೂನು ಬಾಹಿರ ಚಟುವಟಿಕೆಗಳ ನಿಗ್ರಹ ಪಡೆ ರಚಿಸುವಂತೆ ಮ್ಯಾಗಳಮನಿ ಒತ್ತಾಯ,,

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ರೌಡಿ ನಿಗ್ರಹಕ್ಕೆ ಜಿಲ್ಲೆಗೊಂದು ಪಡೆ ರಚಿಸುವದಾಗಿ ಡಿ. ಕೆ ಶಿವಕುಮಾರ್ ಅವರು ನೂತನ ಮುಖ್ಯಮಂತ್ರಿ ಪಟ್ಟಕ್ಕೇರಿದ ತಕ್ಷಣ ಘೋಷಣೆ ಮಾಡಿದ್ದಾರೆ, ರೌಡಿಗಳ ಬಗ್ಗೆ ಈಗಾಗಲೇ ಪೊಲೀಸ್ ಇಲಾಖೆ ಕಾರ್ಯನಿರ್ವಹಿಸುತ್ತಿದೆ. ಇದೇನು ಹೊಸ ವಿಷಯವಾಗಿರುವುದಿಲ್ಲ. ಎಂದು ಸರ್ವಾಂಗೀಣ ಅಭಿವೃದ್ಧಿ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಮ್ಯಾಗಳಮನಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.**

ಅಕ್ರಮ ಗಣಿಗಾರಿಕೆ,ಮರಳು, ಮಣ್ಣು, ದಂದೆಗಳು, ಇಸ್ಪೀಟ್ ಜೂಜಾಟ, ಮಟ್ಕಾ, ಗಾಂಜಾ ಅಫಿಮು, ಅಕ್ರಮ ಮದ್ಯ ಮಾರಾಟ ಇತ್ಯಾದಿ ಕಾನೂನು ಬಾಹಿರ ಚಟುವಟಿಕೆಗಳಿಂದ ರಾಜ್ಯದಲ್ಲಿ ರೌಡಿಗಳು ಸೃಷ್ಟಿಯಾಗುತ್ತಾರೆ. ದೊಡ್ಡ ದೊಡ್ಡ ದಂದೆಕೋರರು ತಮ್ಮ ಲಾಭಕ್ಕಾಗಿ ಬಡವರಿಗೆ ಹಣದ ಆಸೆ ತೋರಿಸಿ ಅವರನ್ನು ರೌಡಿಗಳನ್ನಾಗಿ ಸಾಕಿಕೊಂಡು ಬೆಳೆಸುತ್ತಿದ್ದಾರೆ.



ಹಾಗಾಗಿ ಇಂತಹ ಚಟುವಟಿಕೆ ನಿಗ್ರಹಕ್ಕೆ ವಿವಿಧ ಅಧಿಕಾರಿಗಳು, ನೌಕರರನ್ನೊಳಗೊಂಡ ಪಡೆಯನ್ನು ಪ್ರತಿಯೊಂದು ತಾಲೂಕ ಮಟ್ಟದಲ್ಲಿ ರಚಿಸಬೇಕು. ಈ ಪಡೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು. ಮಂತ್ರಿಗಳು ಸೇರಿದಂತೆ ಯಾವುದೇ ಜನ ಪ್ರತಿನಿಧಿನಗಳ ಹಸ್ತಕ್ಷೇಪ ಮಾಡದಂತೆ ಈ ಅಧಿಕಾರ ನೀಡಬೇಕೆಂದು ಮುಖ್ಯಮಂತ್ರಿಗಳನ್ನು ಮ್ಯಾಗಳಮನಿ ಮಾಧ್ಯಮದ ಮೂಲಕ ಒತ್ತಾಯಿಸಿದ್ದಾರೆ. ಆಗ ಮಾತ್ರ ರೌಡಿಗಳ ನಿರ್ನಾಮ ಸಾಧ್ಯವಾಗುತ್ತದೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಉಚಿತ ಪ್ರಯಾಣ ಮಾಡುವ ಘೋಷಣೆ ಮಾಡಿದ್ದಕ್ಕೆ ಹರ್ಷ ವ್ಯಕ್ತ ಪಡಿಸಿ, ಇದು ಬಡ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ. ಈ ತೀರ್ಮಾನ ಮಾಡಿದ್ದಕ್ಕೆ ಮುಖ್ಯಮಂತ್ರಿಗಳಿಗೆ ಮ್ಯಾಗಳಮನಿ ಅಭಿನಂದನೆಗಳನ್ನು ಸಲ್ಲಿಸಿದರು.

# ಬೀದಿಬದಿ ವ್ಯಾಪಾರಿಗಳಿಗೆ ಕಿರು ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕುಕನೂರು ಪಟ್ಟಣ ಪಂಚಾಯತ್ ವತಿಯಿಂದ ಪಿಎಂ ಸ್ವನಿಧಿ ಯೋಜನೆಯ ಲೋಕ ಕಲ್ಯಾಣ ಮೇಳದಡಿ ಬೀದಿಬದಿ ವ್ಯಾಪಾರಿಗಳಿಗೆ ಕಿರು ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.**

ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಯಾದ ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿ ಯೋಜನೆಯಡಿಯಲ್ಲಿ ನಗರದ ಬೀದಿಬದಿ ವ್ಯಾಪಾರಿಗಳಿಗೆ ಕಿರು ಸಾಲ




ಸೌಲಭ್ಯ ಹಾಗೂ ಸಾಮಾಜಿಕ ಭದ್ರತೆಗಳ ಯೋಜನೆಗಳನ್ನು ಕಲ್ಪಿಸುವುದಕ್ಕಾಗಿ ನಗರ ಮಟ್ಟದಲ್ಲಿ ಬ್ಯಾಂಕ್‌ಗಳ ಸಂಯೋಗದೊಂದಿಗೆ ಲೋಕ ಕಲ್ಯಾಣ ಮೇಳಗಳನ್ನು ಜೂನ್ 1 ರಿಂದ ಜೂ. 30ರ ವರೆಗೆ ಒಂದು ತಿಂಗಳ ಕಾಲ ಆಯೋಜಿಸುವಂತೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ ನವದೆಹಲಿ ಮತ್ತು ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಬೆಂಗಳೂರು ರವರು ಸೂಚಿಸಿರುತ್ತಾರೆ.

ಅದರಂತೆ ಜೂ. 1 ರಿಂದ 30ರ ವರೆಗೆ ಕುಕನೂರು ಪಟ್ಟಣದ ಬೀದಿಬದಿ ವ್ಯಾಪಾರಿಗಳು ಕುಕನೂರು ಪಟ್ಟಣ ಪಂಚಾಯತ್ ಕಾರ್ಯಾಲಯಕ್ಕೆ ಭೇಟಿ ನೀಡಿ, ಪಿ.ಎಮ್ ಸ್ವನಿಧಿ ಯೋಜನೆಯಡಿ ರೂ. 15,000 ಗಳು, ರೂ. 25,000 ಗಳು ಮತ್ತು ರೂ. 50,000 ಗಳ ಕಿರು ಸಾಲ ಸೌಲಭ್ಯಕ್ಕಾಗಿ ಅರ್ಜಿಯನ್ನು ಸಲ್ಲಿಸಲು ನಗರ ಸ್ಥಳೀಯ ಸಂಸ್ಥೆಯ ಡೇ ನಲ್ಮ್ ವಿಭಾಗವನ್ನು ಸಂಪಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕುಕನೂರು ಪ.ಪಂ ಡೇ-ನಲ್ಮ್ ವಿಭಾಗದ ಸಿಬ್ಬಂದಿಗಳನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸುವಂತೆ ಕುಕನೂರು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲೇಖಕರ ದಿನಚರಿ...

# ಯುವಶಕ್ತಿ ದೇಶದ ಭವಿಷ್ಯದ ಶಿಲ್ಪಿಗಳು

ಇಂದಿನ ಸಮಾಜದಲ್ಲಿ ಯುವಜನತೆ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಯುವಕರು ಕೇವಲ ತಮ್ಮ ಜೀವನದ ಬಗ್ಗೆ ಮಾತ್ರ ಯೋಚಿಸುವವರಲ್ಲ, ಅವರು ದೇಶದ ಅಭಿವೃದ್ಧಿಯ ದಿಕ್ಕನ್ನು ತೋರಿಸುವ ಶಕ್ತಿಯಾಗಿದ್ದಾರೆ. "ಇಂದಿನ ಯುವಕರು ನಾಳೆಯ ನಾಯಕರು" ಎಂಬ ಮಾತು ವ್ಯರ್ಥವಲ್ಲ. ಯುವಕರಲ್ಲಿ ಇರುವ ಶಕ್ತಿ, ಉತ್ಸಾಹ, ಕನಸುಗಳು ಮತ್ತು ಹೊಸ ಆಲೋಚನೆಗಳು ಸಮಾಜದ ರೂಪುರೇಷೆಗಳನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿವೆ.

ಯುವಕರಿಗೆ ದೈಹಿಕ ಶಕ್ತಿ ಮಾತ್ರವಲ್ಲದೆ ಮಾನಸಿಕ ಶಕ್ತಿ ಮತ್ತು ಸೃಜನಾತ್ಮಕ ಚಿಂತನೆ ಕೂಡ ಇರುತ್ತದೆ. ಅವರು ಹೊಸ ತಂತ್ರಜ್ಞಾನಗಳನ್ನು ಸುಲಭವಾಗಿ ಅಳವಡಿಸಿಕೊಳ್ಳುತ್ತಾರೆ. ಇಂದಿನ ಡಿಜಿಟಲ್ ಯುಗದಲ್ಲಿ ಯುವಕರು ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದ್ದಾರೆ. ಸ್ಟಾರ್ಟ್‌ಅಪ್‌ಗಳು, ಇನೋವೇಷನ್‌ಗಳು ಮತ್ತು ಸಂಶೋಧನೆಗಳಲ್ಲಿ ಯುವಕರ ಪಾಲು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಆದರೆ, ಯುವಕರ ಮುಂದೆ ಸವಾಲುಗಳೂ ಕಡಿಮೆ ಇಲ್ಲ. ಸಾಮಾಜಿಕ ಮಾಧ್ಯಮಗಳ ಅತಿಯಾದ ಬಳಕೆ, ಸಮಯದ ದುರುಪಯೋಗ, ತಪ್ಪು ಸ್ನೇಹ, ವ್ಯಸನಗಳು ಮತ್ತು ದಿಕ್ಕುತೋಚದ ಬದುಕು ಕೆಲವೊಮ್ಮೆ ಅವರ ಭವಿಷ್ಯವನ್ನು ಹಾಳು ಮಾಡಬಹುದು.

ಆದ್ದರಿಂದ ಯುವಕರು ತಮ್ಮ ಜೀವನದ ಗುರಿಯನ್ನು ಸ್ಪಷ್ಟವಾಗಿ ನಿರ್ಧರಿಸಬೇಕು.
ಗುರಿ ಇರುವ ಜೀವನವೇ ಯಶಸ್ಸಿನ ದಾರಿ ಗುರಿ ಇಲ್ಲದ ಜೀವನ ದಿಕ್ಕು ಇಲ್ಲದ ಹಡಗಿನಂತೆ. ಯುವಕರು ತಮ್ಮ ಜೀವನದಲ್ಲಿ ಒಂದು ಸ್ಪಷ್ಟ ಗುರಿಯನ್ನು ಇಟ್ಟುಕೊಳ್ಳಬೇಕು. ಗುರಿ ಇದ್ದರೆ ಅದನ್ನು ಸಾಧಿಸಲು ಪರಿಶ್ರಮ, ಶಿಸ್ತು ಮತ್ತು ಸಹನೆ ಅಗತ್ಯ. ಒಂದು ದಿನದಲ್ಲಿ ಯಶಸ್ಸು ಸಿಗುವುದಿಲ್ಲ. ನಿರಂತರ ಪ್ರಯತ್ನ ಮತ್ತು ಆತ್ಮವಿಶ್ವಾಸ ಇದ್ದರೆ ಮಾತ್ರ ಸಾಧನೆ ಸಾಧ್ಯ. ಸ್ವಾಮಿ ವಿವೇಕಾನಂದರು ಹೇಳಿದಂತೆ: "ಎದ್ದು ನಿಲ್ಲಿ, ಜಾಗೃತರಾಗಿ, ಗುರಿ ತಲುಪುವವರೆಗೆ ನಿಲ್ಲಬೇಡಿ." ಈ ಮಾತು ಪ್ರತಿಯೊಬ್ಬ ಯುವಕರಿಗೂ ಪ್ರೇರಣೆಯಾಗಬೇಕು.

ವಿಫಲತೆ ಬಂದರೆ ಹೆದರಬಾರದು.
ವಿಫಲತೆ ಯಶಸ್ಸಿನ ಮೆಟ್ಟಿಲು ಎಂದು ತಿಳಿದು ಮತ್ತೆ ಪ್ರಯತ್ನಿಸಬೇಕು. ಶಿಕ್ಷಣ ಮತ್ತು ಕೌಶಲ್ಯದ ಮಹತ್ವ
ಯುವಕರಿಗೆ ಶಿಕ್ಷಣ ಬಹಳ ಮುಖ್ಯ. ಆದರೆ ಕೇವಲ ಪದವಿ ಪಡೆಯುವುದೇ ಸಾಕಾಗುವುದಿಲ್ಲ. ಕೌಶಲ್ಯ ಅಭಿವೃದ್ಧಿ ಕೂಡ ಅಗತ್ಯ. ಇಂದಿನ ಉದ್ಯೋಗ ಕ್ಷೇತ್ರದಲ್ಲಿ ಕೌಶಲ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ಇದೆ. ಸಂವಹನ ಕೌಶಲ್ಯ, ನಾಯಕತ್ವ ಗುಣ, ಸಮಸ್ಯೆ ಪರಿಹಾರ ಸಾಮರ್ಥ್ಯ, ತಂಡದಲ್ಲಿ ಕೆಲಸ ಮಾಡುವ ಮನೋಭಾವ ಇವುಗಳು ಯುವಕರನ್ನು ಯಶಸ್ಸಿನತ್ತ ಕರೆದೊಯ್ಯುತ್ತವೆ. ಇದರ ಜೊತೆಗೆ ಜೀವನ ಮೌಲ್ಯಗಳನ್ನು ಕೂಡ ಯುವಕರು ಕಲಿಯಬೇಕು. ಪ್ರಾಮಾಣಿಕತೆ, ಸಮಯ ಪಾಲನೆ, ಗೌರವ, ಸಹಾನುಭೂತಿ ಇವುಗಳು ವ್ಯಕ್ತಿತ್ವವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತವೆ.
ಸಾಮಾಜಿಕ ಜವಾಬ್ದಾರಿ ಯುವಕರದಾಗಿದೆ
ಯುವಕರು ತಮ್ಮ ಕುಟುಂಬದಷ್ಟೇ ಸಮಾಜದ ಬಗ್ಗೆ ಕೂಡ ಕಾಳಜಿ ವಹಿಸಬೇಕು. ಪರಿಸರ ಸಂರಕ್ಷಣೆ, ಸ್ವಚ್ಛತೆ, ಶಿಕ್ಷಣ ಜಾಗೃತಿ, ರಕ್ತದಾನ, ಸಮಾಜ ಸೇವೆ ಇಂತಹ ಕಾರ್ಯಗಳಲ್ಲಿ ಭಾಗವಹಿಸುವುದು ಅವರ ಕರ್ತವ್ಯವಾಗಿದೆ.
ಒಬ್ಬ ಯುವಕ ತನ್ನ ಸುತ್ತಲಿನ ಸಮಾಜವನ್ನು ಉತ್ತಮಗೊಳಿಸಲು ಪ್ರಯತ್ನಿಸಿದರೆ ದೇಶದ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ. ಚಿಕ್ಕ ಚಿಕ್ಕ ಉತ್ತಮ ಕೆಲಸಗಳು ದೊಡ್ಡ ಬದಲಾವಣೆಗೆ ಕಾರಣವಾಗುತ್ತವೆ.
ತಂತ್ರಜ್ಞಾನ ಉಪಯೋಗವೇ ಅಥವಾ ಅಪಾಯವೇ?
ಇಂದಿನ ಯುವಕರು ಮೊಬೈಲ್ ಮತ್ತು ಇಂಟರ್‌ನೆಟ್ ಇಲ್ಲದೆ ಬದುಕಲು ಸಾಧ್ಯವಿಲ್ಲ. ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಅದು ಜ್ಞಾನ ಸಂಪಾದನೆಗೆ ಸಹಾಯ ಮಾಡುತ್ತದೆ. ಆದರೆ ಅದೇ ತಂತ್ರಜ್ಞಾನವನ್ನು ದುರುಪಯೋಗ ಮಾಡಿದರೆ ಸಮಯ ವ್ಯರ್ಥವಾಗುತ್ತದೆ.
ಸಾಮಾಜಿಕ ಜಾಲತಾಣಗಳಲ್ಲಿ ಗಂಟೆಗಟ್ಟಲೆ ಕಾಲ ಕಳೆಯುವುದರಿಂದ ಯಾವುದೇ ಪ್ರಯೋಜನ ಇಲ್ಲ.

ಅದರ ಬದಲು ಆನ್‌ಲೈನ್ ಕೋರ್ಸ್‌ಗಳು, ಹೊಸ ವಿಷಯಗಳ ಅಧ್ಯಯನ, ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಉತ್ತಮ.
ಯುವಕರು ತಂತ್ರಜ್ಞಾನವನ್ನು ತಮ್ಮ ಅಭಿವೃದ್ಧಿಗಾಗಿ ಬಳಸಬೇಕು, ವ್ಯಸನವಾಗದಂತೆ ನೋಡಿಕೊಳ್ಳಬೇಕು.ಆರೋಗ್ಯವೇ ಮಹಾಭಾಗ್ಯ
ಯುವಕರಿಗೆ ಉತ್ತಮ ಆರೋಗ್ಯ ಅತ್ಯಗತ್ಯ. ಆರೋಗ್ಯ ಇದ್ದರೆ ಮಾತ್ರ ಗುರಿಗಳನ್ನು ಸಾಧಿಸಲು ಸಾಧ್ಯ. ನಿಯಮಿತ ವ್ಯಾಯಾಮ, ಯೋಗ, ಧ್ಯಾನ, ಉತ್ತಮ ಆಹಾರ ಪದ್ಧತಿ ಇವುಗಳನ್ನು ಯುವಕರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಂದಿನ ಯುವಕರಲ್ಲಿ ಹೆಚ್ಚುತ್ತಿರುವ ಒತ್ತಡ (stress) ಕೂಡ ಒಂದು ದೊಡ್ಡ ಸಮಸ್ಯೆಯಾಗಿದೆ. ಇದನ್ನು ಕಡಿಮೆ ಮಾಡಲು ಧನಾತ್ಮಕ ಚಿಂತನೆ, ಸಮಯ ನಿರ್ವಹಣೆ ಮತ್ತು ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು ಅಗತ್ಯ.
ದೇಶ ನಿರ್ಮಾಣದಲ್ಲಿ ಯುವಕರ ಪಾತ್ರ.

ಭಾರತವು ಯುವಜನರ ದೇಶ ಎಂದು ಕರೆಯಲ್ಪಡುತ್ತದೆ. ನಮ್ಮ ದೇಶದ ಬಹುಪಾಲು ಜನಸಂಖ್ಯೆ ಯುವಕರಿಂದ ಕೂಡಿದೆ. ಆದ್ದರಿಂದ ದೇಶದ ಭವಿಷ್ಯ ಯುವಕರ ಕೈಯಲ್ಲಿದೆ ಎಂದು ಹೇಳಬಹುದು. ಯುವಕರು ರಾಜಕೀಯ, ವಿಜ್ಞಾನ, ಶಿಕ್ಷಣ, ಕ್ರೀಡೆ, ಉದ್ಯಮ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಬೇಕು. ದೇಶಪ್ರೇಮ ಮತ್ತು ನೈತಿಕ ಮೌಲ್ಯಗಳೊಂದಿಗೆ ಕೆಲಸ ಮಾಡಿದರೆ ಭಾರತವನ್ನು ವಿಶ್ವದಲ್ಲಿ ಮುಂಚೂಣಿಗೆ ತರುವ ಶಕ್ತಿ ಯುವಕರಲ್ಲಿದೆ.ಯುವಕರು ತಮ್ಮ ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ಬಳಸಿದರೆ ಅವರು ತಮ್ಮ ಜೀವನವನ್ನು ಮಾತ್ರವಲ್ಲದೆ ಸಮಾಜ ಮತ್ತು ದೇಶದ ಭವಿಷ್ಯವನ್ನೂ ಬದಲಾಯಿಸಬಹುದು.

ಕನಸು ಕಾಣುವುದು ಮುಖ್ಯ, ಆದರೆ ಆ ಕನಸುಗಳನ್ನು ನನಸಾಗಿಸಲು ಪರಿಶ್ರಮ ಇನ್ನೂ ಮುಖ್ಯ. ಪ್ರತಿಯೊಬ್ಬ ಯುವಕನು ತನ್ನನ್ನು ತಾನು ಕೇಳಿಕೊಳ್ಳಬೇಕು: ನನ್ನ ಗುರಿ ಏನು? ನಾನು ಸಮಾಜಕ್ಕೆ ಏನು ಕೊಡುಗೆ ನೀಡುತ್ತಿದ್ದೇನೆ? ನನ್ನ ಸಮಯವನ್ನು ಸರಿಯಾಗಿ ಬಳಸುತ್ತಿದ್ದೇನೆಯಾ? ಈ ಪ್ರಶ್ನೆಗಳಿಗೆ ಪ್ರಾಮಾಣಿಕ ಉತ್ತರ ಕಂಡುಕೊಂಡಾಗ ಜೀವನದ ದಾರಿ ಸ್ಪಷ್ಟವಾಗುತ್ತ ಹೋಗುತ್ತದೆ.
ಯುವಕರಲ್ಲಿ ನಾಯಕತ್ವದ ಗುಣ
ಯುವಕರಲ್ಲಿ ಸಹಜವಾಗಿಯೇ ನಾಯಕತ್ವದ ಗುಣಗಳು ಇರುತ್ತವೆ. ಆದರೆ ಅವುಗಳನ್ನು ಸರಿಯಾಗಿ ಬೆಳಸಿಕೊಳ್ಳುವುದು ಬಹಳ ಮುಖ್ಯ. ನಾಯಕತ್ವ ಎಂದರೆ ಕೇವಲ ಇತರರನ್ನು ಆಜ್ಞಾಪಿಸುವುದು ಅಲ್ಲ; ಬದಲಾಗಿ ಅವರೊಂದಿಗೆ ಕೆಲಸ ಮಾಡುವುದು,

ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಎಲ್ಲರನ್ನು ಒಟ್ಟಿಗೆ ಮುಂದಕ್ಕೆ ಕೊಂಡೊಯ್ಯುವ ಸಾಮರ್ಥ್ಯ. ಒಬ್ಬ ಉತ್ತಮ ನಾಯಕನಲ್ಲಿ ಧೈರ್ಯ, ಪ್ರಾಮಾಣಿಕತೆ, ತಾಳ್ಮೆ ಮತ್ತು ದೂರದೃಷ್ಟಿ ಇರಬೇಕು. ಕಾಲೇಜು ಜೀವನದಲ್ಲೇ ಯುವಕರು ವಿವಿಧ ಸಂಘಟನೆಗಳು, ಕಾರ್ಯಕ್ರಮಗಳು, ಸ್ವಯಂಸೇವಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ನಾಯಕತ್ವ ಗುಣಗಳನ್ನು ಅಭಿವೃದ್ಧಿಪಡಿಸಬಹುದು. ನಾಯಕತ್ವವು ಕೇವಲ ವ್ಯಕ್ತಿಗತ ಯಶಸ್ಸಿಗೆ ಮಾತ್ರವಲ್ಲ, ಸಮಾಜದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ. ಒಬ್ಬ ಉತ್ತಮ ಯುವ ನಾಯಕ ತನ್ನ ಸುತ್ತಲಿನ ಜನರನ್ನು ಪ್ರೇರೇಪಿಸಿ ಒಳ್ಳೆಯ ಕೆಲಸಗಳಿಗೆ ಕರೆದೊಯ್ಯಬಹುದು. ಕನಸು ಕಾಣುವ ಧೈರ್ಯ ಯುವಕರಿಗೆ ದೊಡ್ಡ ಕನಸುಗಳು ಇರಬೇಕು.

ಕನಸು ಕಾಣುವವರೇ ಜೀವನದಲ್ಲಿ ಹೊಸ ಸಾಧನೆಗಳನ್ನು ಮಾಡುತ್ತಾರೆ. ಇತಿಹಾಸವನ್ನು ನೋಡಿದರೆ ಅನೇಕ ಮಹಾನ್ ವ್ಯಕ್ತಿಗಳು ತಮ್ಮ ಯುವಕಾಲದಲ್ಲೇ ದೊಡ್ಡ ಕನಸುಗಳನ್ನು ಕಂಡಿದ್ದರು. ಆದರೆ ಕನಸು ಕಾಣುವುದು ಮಾತ್ರ ಸಾಕಾಗುವುದಿಲ್ಲ. ಆ ಕನಸುಗಳನ್ನು ಸಾಧಿಸಲು ಯೋಜನೆ, ಪರಿಶ್ರಮ ಮತ್ತು ನಿರಂತರ ಪ್ರಯತ್ನ ಅಗತ್ಯ. ಕೆಲವೊಮ್ಮೆ ಅಡೆತಡೆಗಳು ಬರುತ್ತವೆ. ಕೆಲವರು ಹಾಸ್ಯ ಮಾಡಬಹುದು. ಆದರೆ ನಿಜವಾದ ಯುವಕ ತನ್ನ ಗುರಿಯಿಂದ ಹಿಂದೆ ಸರಿಯುವುದಿಲ್ಲ. ಕನಸುಗಳು ನಮಗೆ ದಾರಿ ತೋರಿಸುತ್ತವೆ. ಗುರಿಗಳು ನಮಗೆ ಗಮ್ಯಸ್ಥಾನ ತಲುಪಿಸುತ್ತವೆ. ಸೃಜನಾತ್ಮಕ ಚಿಂತನೆ ಮತ್ತು ಹೊಸ ಆವಿಷ್ಕಾರಗಳು
ಯುವಕರಲ್ಲಿ ಹೊಸದಾಗಿ ಯೋಚಿಸುವ ಶಕ್ತಿ ಹೆಚ್ಚು. ಅವರು ಸಮಾಜದ ಸಮಸ್ಯೆಗಳಿಗೆ ಹೊಸ ಪರಿಹಾರಗಳನ್ನು ಹುಡುಕಬಹುದು. ಇಂದಿನ ಕಾಲದಲ್ಲಿ ಅನೇಕ ಸ್ಟಾರ್ಟ್‌ಅಪ್‌ಗಳು ಯುವಕರಿಂದಲೇ ಆರಂಭವಾಗಿವೆ.

ಸಣ್ಣ ಆಲೋಚನೆಯೂ ದೊಡ್ಡ ಬದಲಾವಣೆಗೆ ಕಾರಣವಾಗಬಹುದು.
ಉದಾಹರಣೆಗೆ, ಪರಿಸರ ಸಂರಕ್ಷಣೆ, ತಂತ್ರಜ್ಞಾನ ಅಭಿವೃದ್ಧಿ, ಶಿಕ್ಷಣ ಸುಧಾರಣೆ, ಆರೋಗ್ಯ ಸೇವೆಗಳಲ್ಲಿ ಯುವಕರು ಹೊಸ ಪ್ರಯೋಗಗಳನ್ನು ಮಾಡಬಹುದು. ಸೃಜನಾತ್ಮಕ ಚಿಂತನೆ ಬೆಳೆಯಲು ಪುಸ್ತಕ ಓದುವಿಕೆ, ಚರ್ಚೆಗಳು, ಸಂಶೋಧನೆ ಮತ್ತು ಅನುಭವ ಬಹಳ ಸಹಾಯಕವಾಗುತ್ತವೆ. ಹೊಸ ವಿಷಯಗಳನ್ನು ಕಲಿಯುವ ಆಸಕ್ತಿ ಯುವಕರಲ್ಲಿ ಇರಬೇಕು.
ಸಮಯದ ಮಹತ್ವ
ಯುವಕಾಲವು ಜೀವನದ ಅತ್ಯಂತ ಅಮೂಲ್ಯವಾದ ಹಂತವಾಗಿದೆ. ಈ ಸಮಯವನ್ನು ಸರಿಯಾಗಿ ಬಳಸಿಕೊಂಡರೆ ಜೀವನದ ಉಳಿದ ಭಾಗ ಸುಂದರವಾಗುತ್ತದೆ. ಸಮಯವನ್ನು ವ್ಯರ್ಥ ಮಾಡುವವರು ನಂತರ ಪಶ್ಚಾತ್ತಾಪ ಪಡುವ ಸಾಧ್ಯತೆ ಹೆಚ್ಚು. ಆದ್ದರಿಂದ ಸಮಯ ನಿರ್ವಹಣೆ ಯುವಕರಿಗೆ ಬಹಳ ಮುಖ್ಯ. ದಿನದ ಕೆಲಸಗಳನ್ನು ಯೋಜನೆ ಮಾಡಿಕೊಳ್ಳುವುದು,

ಪ್ರಾಥಮ್ಯವನ್ನು ನಿಗದಿಪಡಿಸುವುದು ಮತ್ತು ಶಿಸ್ತಿನಿಂದ ಕೆಲಸ ಮಾಡುವುದು ಯಶಸ್ಸಿನ ಮಾರ್ಗವನ್ನು ಸುಲಭಗೊಳಿಸುತ್ತದೆ. ಒಂದು ಗಂಟೆ ವ್ಯರ್ಥವಾದರೆ ಅದು ಮತ್ತೆ ಹಿಂದಿರುಗುವುದಿಲ್ಲ. ಆದ್ದರಿಂದ ಪ್ರತಿಯೊಂದು ಕ್ಷಣವೂ ಅಮೂಲ್ಯ ಎಂದು ಯುವಕರು ಅರಿತುಕೊಳ್ಳಬೇಕು. ಸಂಸ್ಕೃತಿ ಮತ್ತು ಮೌಲ್ಯಗಳ ಮಹತ್ವ ಆಧುನಿಕತೆ ಮತ್ತು ತಂತ್ರಜ್ಞಾನ ಬೆಳವಣಿಗೆಯ ನಡುವೆ ನಮ್ಮ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಮರೆಯಬಾರದು. ಹಿರಿಯರಿಗೆ ಗೌರವ, ಕುಟುಂಬದ ಬಾಂಧವ್ಯ, ಸಹಾನುಭೂತಿ, ಸಹಕಾರ ಇವುಗಳು ಭಾರತೀಯ ಸಂಸ್ಕೃತಿಯ ಪ್ರಮುಖ ಅಂಶಗಳು. ಯುವಕರು ಜ್ಞಾನ ಮತ್ತು ಆಧುನಿಕತೆಯನ್ನು ಸ್ವೀಕರಿಸುವ ಜೊತೆಗೆ ತಮ್ಮ ಸಂಸ್ಕೃತಿಯನ್ನೂ ಉಳಿಸಬೇಕು.

ಇದು ವ್ಯಕ್ತಿತ್ವವನ್ನು ಸಮತೋಲನದಲ್ಲಿ ಇಡುತ್ತದೆ.
ಒಬ್ಬ ಯುವಕನು ವಿದ್ಯಾವಂತನಾಗುವುದಷ್ಟೇ ಸಾಕಾಗುವುದಿಲ್ಲ; ಅವನು ಸಂಸ್ಕಾರವಂತನಾಗಿರಬೇಕು.
ಸಮಾಜದಲ್ಲಿ ಮಾದರಿ ಯುವಕರ ಅಗತ್ಯ
ಸಮಾಜಕ್ಕೆ ಉತ್ತಮ ಮಾದರಿಯಾಗುವ ಯುವಕರ ಅಗತ್ಯ ಇದೆ. ಒಬ್ಬ ಯುವಕ ತನ್ನ ನಡೆ-ನುಡಿಗಳ ಮೂಲಕ ಇತರರಿಗೆ ಪ್ರೇರಣೆ ನೀಡಬಹುದು.ಅವನ ಪ್ರಾಮಾಣಿಕತೆ, ಪರಿಶ್ರಮ, ಶಿಸ್ತು ಮತ್ತು ಸೇವಾ ಮನೋಭಾವ ಇತರರನ್ನು ಕೂಡ ಪ್ರೇರೇಪಿಸುತ್ತದೆ. ಸಮಾಜದಲ್ಲಿ ಒಳ್ಳೆಯ ಮಾದರಿ ವ್ಯಕ್ತಿಗಳು ಹೆಚ್ಚಾದಂತೆ ಸಮಾಜವೂ ಉತ್ತಮವಾಗುತ್ತದೆ. ಇದರಿಂದ ಯುವಕರು ತಮ್ಮ ನಡೆ-ನುಡಿಗಳ ಬಗ್ಗೆ ಸದಾ ಜಾಗರೂಕರಾಗಿರಬೇಕು.

ಮಹಿಳಾ ಯುವಶಕ್ತಿಯ ಪಾತ್ರ
ಇಂದಿನ ಸಮಾಜದಲ್ಲಿ ಮಹಿಳಾ ಯುವಕರು ಕೂಡ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸುತ್ತಿದ್ದಾರೆ. ಶಿಕ್ಷಣ, ವಿಜ್ಞಾನ, ಕ್ರೀಡೆ, ಆಡಳಿತ, ಉದ್ಯಮ ಎಲ್ಲೆಡೆ ಮಹಿಳೆಯರು ಮಹತ್ವದ ಸಾಧನೆಗಳನ್ನು ಮಾಡುತ್ತಿದ್ದಾರೆ. ಮಹಿಳೆಯರಿಗೆ ಸಮಾನ ಅವಕಾಶ ನೀಡಿದರೆ ಅವರು ಸಮಾಜದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡುತ್ತಾರೆ. ಯುವಕರು ಮಹಿಳೆಯರನ್ನು ಗೌರವಿಸುವ ಮನೋಭಾವವನ್ನು ಹೊಂದಿರಬೇಕು. ಯುವಶಕ್ತಿ ಎಂದರೆ ಕೇವಲ ಪುರುಷರ ಶಕ್ತಿ ಮಾತ್ರವಲ್ಲ; ಮಹಿಳೆಯರ ಶಕ್ತಿಯೂ ಸೇರಿ ಸಮಾಜವನ್ನು ಮುನ್ನಡೆಸುತ್ತದೆ.
ಯುವಕರು ದೇಶದ ಭವಿಷ್ಯದ ನಿಜವಾದ ಶಿಲ್ಪಿಗಳು. ಅವರ ಆಲೋಚನೆಗಳು, ಪರಿಶ್ರಮ ಮತ್ತು ದೃಢಸಂಕಲ್ಪದಿಂದ ಸಮಾಜದಲ್ಲಿ ಹೊಸ ಬೆಳಕು ಮೂಡಬಹುದು.
ಪ್ರತಿಯೊಬ್ಬ ಯುವಕ ತನ್ನ ಜೀವನವನ್ನು ಅರ್ಥಪೂರ್ಣವಾಗಿಸಿಕೊಳ್ಳಲು ಪ್ರಯತ್ನಿಸಬೇಕು.

ಸ್ವಂತ ಯಶಸ್ಸಿನ ಜೊತೆಗೆ ಸಮಾಜದ ಅಭಿವೃದ್ಧಿಗೂ ಕೊಡುಗೆ ನೀಡಬೇಕು.
ಯುವಕರು ತಮ್ಮ ಶಕ್ತಿಯನ್ನು ಸಕಾರಾತ್ಮಕ ದಿಕ್ಕಿನಲ್ಲಿ ಬಳಸಿದರೆ ಅವರು ಅಸಾಧ್ಯವೆನ್ನುವ ಕಾರ್ಯಗಳನ್ನೂ ಸಾಧ್ಯವಾಗಿಸಬಹುದು.
ಕೊನೆಗೆ ಒಂದು ಪ್ರೇರಣಾದಾಯಕ ಸಂದೇಶ:
ಯುವಕನ ಕನಸು ದೇಶದ ಭವಿಷ್ಯ,
ಯುವಕನ ಪರಿಶ್ರಮ ದೇಶದ ಶಕ್ತಿ,
ಯುವಕನ ಸತ್ಯನಿಷ್ಠೆ ದೇಶದ ಗೌರವ.
ಯುವಕರು ತಮ್ಮ ಶಕ್ತಿಯನ್ನು ಅರಿತು, ತಮ್ಮ ಗುರಿಯತ್ತ ದೃಢವಾಗಿ ನಡೆದುಕೊಂಡರೆ ಅವರ ಜೀವನವೂ ಪ್ರಕಾಶಮಾನವಾಗುತ್ತದೆ ಮತ್ತು ದೇಶವೂ ಅಭಿವೃದ್ಧಿಯ ದಾರಿಯಲ್ಲಿ ಮುನ್ನಡೆಯುತ್ತದೆ.ಯುವಜನತೆ ಎಂದು ಹೆಸರಿಸಿಕೊಂಡಿರುವ ನಾವು ಇದೆಲ್ಲದರ ಬಗ್ಗೆ ಕೊಂಚ ಆಲೋಚಿಸೋಣ..!




ಶ್ರೀಧರ ಎನ್. ಹೆಗಡೆ

# "ಗಟ್ಟಿಯಾಗಿ ಕೂಗಿ ಹೇಳು"

ಗಟ್ಟಿಯಾಗಿ ಕೂಗಿ ಹೇಳು
ಒಪ್ಪಿಕೊಂಡೆ ಎಂದು
ಈ ಕೊರೆವ ಚಳಿಗೂ
ಬಿಸಿ ತಾಕುವ ಹಾಗೆ

ಗುಸುಗುಟ್ಟುವ ಪರಿಯ ಬಿಟ್ಟು
ಸಪ್ತ ಸಾಗರಗಳ ಧಾಟಿ ನಿಂತು
ಗಟ್ಟಿಯಾಗಿ ಕೂಗಿ ಹೇಳು
ಒಪ್ಪಿಕೊಂಡೆ ಎಂದು
ಆ ಎತ್ತರದ ಪರ್ವತಗಳು
ಕುಸಿದು ಬೀಳುವ ಹಾಗೆ



ಗಮನವಿಟ್ಟು ಕೇಳು
ನಿನ್ನಂತರಂಗವ ಕರೆದು
ಪ್ರೀತಿಯ ಧಾರೆ ಎರೆದು
ಗಟ್ಟಿಯಾಗಿ ಕೂಗಿ ಹೇಳು
ಒಪ್ಪಿಕೊಂಡೆ ಎಂದು
ಈ ಸೃಷ್ಟಿ ಮತ್ತೊಮ್ಮೆ
ಮೈನೆರೆಯುವ ಹಾಗೆ


...ಚಂದ್ರಕಲಾ ನೆಲೆ
(ಮೈಸೂರು)

# ಪರಿಸರ ಅಭಿಯಾನ ; ಪೋಸ್ಟರ್ ಬಿಡುಗಡೆ



ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಕೊಪ್ಪಳ ಘಟಕದ ವತಿಯಿಂದ ಜೂನ್ 5ರಿಂದ 15ರವರೆಗೆ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿರುವ "ಪರಿಸರ ಅಭಿಯಾನ?2026" ಅಂಗವಾಗಿ "ಪಾಲಕತ್ವ ಜವಾಬ್ದಾರಿಯ ಮರುಸ್ಥಾಪನೆ" ಎಂಬ ಸಂದೇಶವುಳ್ಳ ಪೋಸ್ಟರ್ ಅನ್ನು ಕೊಪ್ಪಳದ ಅರಣ್ಯಾಧಿಕಾರಿ ಮುಲ್ಲಾ ಸಾಹೇಬ್ ಅವರು ಬಿಡುಗಡೆಗೊಳಿಸಿದರು.

ಪೋಸ್ಟರ್ ಬಿಡುಗಡೆ ಬಳಿಕ ಪರಿಸರ ಸಂರಕ್ಷಣೆ ಹಾಗೂ ಹಸಿರು ವಾತಾವರಣ ನಿರ್ಮಾಣದ ಉದ್ದೇಶದಿಂದ ಗಿಡ ನೆಡುವ ಕಾರ್ಯಕ್ರಮಕ್ಕೆ ಅಗತ್ಯವಿರುವ ಸಸಿಗಳನ್ನು ಒದಗಿಸುವಂತೆ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ವತಿಯಿಂದ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಯಿತು. ಮನವಿಗೆ ಸ್ಪಂದಿಸಿದ ಅರಣ್ಯಾಧಿಕಾರಿ ಮುಲ್ಲಾ ಸಾಹೇಬ್ ಅವರು 100 ಗಿಡಗಳನ್ನು ನೀಡಲು ಅನುಮೋದನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆಯ ಪದಾಧಿಕಾರಿಗಳು, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಅಭಿಯಾನದ ಅಂಗವಾಗಿ ಗಿಡ ನೆಡುವುದು, ಪರಿಸರ ಜಾಗೃತಿ ಮೂಡಿಸುವುದು ಹಾಗೂ ಜನರಲ್ಲಿ ಪ್ರಕೃತಿ ಸಂರಕ್ಷಣೆಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಕೊಪ್ಪಳ ಘಟಕದ ಅಧ್ಯಕ್ಷ ಏಜಾಜ್ ಶರೀಫ್, ಕಾರ್ಯಕರ್ತರಾದ ಮೊಹಮ್ಮದ್ ಯೂಸುಫ್, ಅಸದುಲ್ಲಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಪರಿಸರದ ರಕ್ಷಕ ಮಣ್ಣಿನ ಗಣಪನ ಹರಿಕಾರ

# ಶ್ರೀ ಮುತ್ತಣ್ಣ ಭರಡಿ














**ಸಮಾಜದ ಒಳಿತಿಗಾಗಿ ನಿಸ್ವಾರ್ಥವಾಗಿ ದುಡಿಯುವ ವ್ಯಕ್ತಿಗಳು ಅಪರೂಪ. ತಮ್ಮ ಬದುಕನ್ನೇ ಪರಿಸರ ಸಂರಕ್ಷಣೆ, ಸಮಾಜ ಸೇವೆ ಹಾಗೂ ಜನಜಾಗೃತಿಗೆ ಸಮರ್ಪಿಸಿಕೊಂಡಿರುವ ವ್ಯಕ್ತಿತ್ವವೇ ಶ್ರೀ ಮುತ್ತಣ್ಣ ಭರಡಿ. ಜೂನ್ 8ರಂದು ಜನ್ಮದಿನ ಆಚ-ರಿಸಿಕೊಳ್ಳುತ್ತಿರುವ ಅವರ ಸೇವಾ ಪಯಣವು ಪರಿಸರ ಪ್ರೇಮಿಗಳಿಗೆ, ಯುವಜನತೆಗೆ ಹಾಗೂ ಸಮಾಜಮುಖಿ ಚಿಂತಕರಿಗೆ ಸ್ಫೂರ್ತಿದಾಯಕ ಮಾದರಿಯಾಗಿದೆ.**

ಪರಿಸರ ಜಾಗೃತಿಯ ಅಚಲ ಹೋರಾಟಗಾರ

"ಮಣ್ಣಿನ ಗಣಪ ಪರಿಸರ ಉಳಿಸಿ" ಎಂಬ ಧ್ಯೇಯವನ್ನು ಜೀವನದ ಸಂಕಲ್ಪವನ್ನಾಗಿಸಿಕೊಂಡಿರುವ ಶ್ರೀ ಮುತ್ತಣ್ಣ ಭರಡಿ ಅವರು ಕಳೆದ ಒಂದೂವರೆ ದಶಕಕ್ಕೂ ಹೆಚ್ಚು ಕಾಲ ಪರಿಸರ ಸಂರಕ್ಷಣೆಯ ಕ್ಷೇತ್ರದಲ್ಲಿ ಅವಿರತ ಹೋರಾಟ ನಡೆಸುತ್ತಿದ್ದಾರೆ. ಗಣೇಶೋತ್ಸವದ ಸಂದರ್ಭದಲ್ಲಿ ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಗಣೇಶ ಮೂರ್ತಿಗಳ ಬಳಕೆಯನ್ನು ತಡೆಯಲು ಹಾಗೂ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸಲು ರಾಜ್ಯದಾದ್ಯಂತ ಜಾಗೃತಿ ಮೂಡಿಸುತ್ತಿದ್ದಾರೆ.

2011ರಲ್ಲಿ ಗದಗ ಜಿಲ್ಲೆಯ ಗಣೇಶ ಮೂರ್ತಿ ತಯಾರಕರನ್ನು ಒಗ್ಗೂಡಿಸಿ ಗದಗ ಜಿಲ್ಲಾ ಗಣೇಶ ಮೂರ್ತಿ ತಯಾರಕರ ಸಂಘವನ್ನು ಸ್ಥಾಪಿಸುವ ಮೂಲಕ ಪರಿಸರ ಸ್ನೇಹಿ ಗಣೇಶೋತ್ಸವದ ಚಳವಳಿಗೆ ಭದ್ರ ಅಡಿಪಾಯ ಹಾಕಿದರು. ಕಲಾವಿದರಿಗೆ ತರಬೇತಿ, ಮಾರ್ಗದರ್ಶನ ಹಾಗೂ ಮಣ್ಣಿನ ಮೂರ್ತಿಗಳ ತಯಾರಿಕೆಗೆ ಉತ್ತೇಜನ ನೀಡುವ ಮೂಲಕ ಸಾವಿರಾರು ಜನರಲ್ಲಿ ಪರಿಸರ ಕಾಳಜಿಯನ್ನು ಬೆಳೆಸಿದ್ದಾರೆ.

ಸರ್ಕಾರದ ಮಟ್ಟದಲ್ಲಿ ನಿರಂತರ ಹೋರಾಟ

2012ರಿಂದಲೇ ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ನಿರಂತರ ಮನವಿ ಸಲ್ಲಿಸುವ ಮೂಲಕ ಪರಿಸರ ರಕ್ಷಣೆಯ ಹೋರಾಟವನ್ನು ವ್ಯವಸ್ಥಿತವಾಗಿ ಮುಂದುವರಿಸಿಕೊಂಡು ಬಂದಿದ್ದಾರೆ.

ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳಿಗೆ ವಿಶೇಷ ಪ್ರೋತ್ಸಾಹ ನೀಡಬೇಕು ಹಾಗೂ ಪಿಒಪಿ ಮೂರ್ತಿಗಳ ಬಳಕೆಯನ್ನು ನಿಯಂತ್ರಿಸಬೇಕು ಎಂಬ ಅವರ ಬೇಡಿಕೆ ರಾಜ್ಯದಾದ್ಯಂತ ಚರ್ಚೆಗೆ ಗ್ರಾಸವಾಗಿದೆ.

ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಅವರು ಕೈಗೊಂಡ ಪ್ರಯತ್ನಗಳು ಗಮನಾರ್ಹವಾಗಿವೆ. ಇದರಿಂದ ಅನೇಕ ಕಲಾವಿದರಿಗೆ ಉದ್ಯೋಗಾವಕಾಶ ದೊರೆತಿದ್ದು, ಪರಿಸರ ಜಾಗೃತಿಯ ಜೊತೆಗೆ ಗ್ರಾಮೀಣ ಆರ್ಥಿಕತೆಗೆ ಸಹ ನೆರವಾಗುತ್ತಿದೆ.

ಸಮಾಜಮುಖಿ ಸೇವೆಯ ಸಕ್ರಿಯ ಮುಖ

ಪರಿಸರ ಹೋರಾಟದ ಜೊತೆಗೆ ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿ-ಕ ಕ್ಷೇತ್ರಗಳಲ್ಲಿಯೂ ಶ್ರೀ ಭರಡಿ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ವಿವಿಧ ಶಾಲಾ ಅಭಿವೃದ್ಧಿ ಸಮಿತಿಗಳಲ್ಲಿ ಕಾರ್ಯನಿರ್ವಹಿಸುವ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ತಮ್ಮ ಅಮೂಲ್ಯ ಕೊಡುಗೆ ನೀಡುತ್ತಿದ್ದು, ಹಲವಾರು ಸಂಘ-ಸಂಸ್ಥೆಗಳ ಮೂಲಕ ಸಮಾಜ ಸೇವೆಯಲ್ಲಿ ನಿರಂತರವಾಗಿ ಭಾಗಿಯಾಗಿದ್ದಾರೆ. ಶ್ರೀ ಮಾರುತಿ ದೇವಸ್ಥಾನ ಸಂಘ, ನಾಡಕವಿ ಶ್ರೀ ಹುಯಿಲಗೋಳ ನಾರಾಯಣ-ರಾಯರ ಅಭಿಮಾನಿ ಬಳಗ, ಪರಿಸರ ಸಂರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಸಂಘಟನೆಗಳಲ್ಲಿ ಅವರ ಸೇವೆ ವಿಶಿಷ್ಟ ಸ್ಥಾನ ಪಡೆದಿದೆ.

ಸೇವೆಗೆ ಸಂದ ಗೌರವ ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ

ಪರಿಸರ ಸಂರಕ್ಷಣೆಗಾಗಿ ಅವರು ನಡೆಸಿದ ದೀರ್ಘಕಾಲದ ಹೋರಾಟ, ಮಣ್ಣಿನ ಗಣೇಶ ಮೂರ್ತಿಗಳ ಕುರಿತು ಮೂಡಿಸಿದ ಜಾಗೃತಿ ಹಾಗೂ ಸಮಾಜಮುಖಿ ಕಾರ್ಯಗಳನ್ನು ಗುರುತಿಸಿ ಇತ್ತೀಚೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 50ನೇ ವರ್ಷದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯಲ್ಲಿ "ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ" ನೀಡಿ ಗೌರವಿಸಲಾಗಿದೆ.

ಈ ಪ್ರಶಸ್ತಿ ಕೇವಲ ಒಬ್ಬ ವ್ಯಕ್ತಿಗೆ ಸಂದ ಸನ್ಮಾನವಲ್ಲ; ಪರಿಸರ ಉಳಿವಿಗಾಗಿ ಹೋರಾಡುವ ಪ್ರತಿಯೊಬ್ಬ ಪರಿಸರ ಪ್ರೇಮಿಯ ಹೋರಾಟಕ್ಕೆ ಸಂದ ಮಾನ್ಯತೆಯಾಗಿದೆ. ವರ್ಷಗಳ ಕಾಲ ನಿಸ್ವಾರ್ಥವಾಗಿ ಮಾಡಿದ ಸೇವೆಗೆ ದೊರೆತ ಈ ಗೌರವ, ಅವರ ಕಾರ್ಯಕ್ಷೇತ್ರಕ್ಕೆ ಮತ್ತಷ್ಟು ಶಕ್ತಿ ಮತ್ತು ಪ್ರೇರಣೆ ತುಂಬಿದೆ.

ಗೌರವಗಳ ಹಿಂದೆ ಇರುವ ಸೇವೆಯ ಶಕ್ತಿ

ಶ್ರೀ ಮುತ್ತಣ್ಣ ಭರಡಿ ಅವರ ಪರಿಸರ ಕಾಳಜಿ, ಸಾಮಾಜಿಕ ಬದ್ಧತೆ ಹಾಗೂ ಜನಜಾಗೃತಿಯ ಕಾರ್ಯಗಳಿಗೆ ಗದಗ ನಗರ ಪೊಲೀಸ್ ಇಲಾಖೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಸಂಘ-ಸಂಸ್ಥೆಗಳು, ಕಲಾವಿದರು ಹಾಗೂ ಸಾರ್ವಜನಿಕರು ಹಲವಾರು ಬಾರಿ ಸನ್ಮಾನಿಸಿ ಗೌರವಿಸಿದ್ದಾರೆ.

ಪ್ಲಾಸ್ಟಿಕ್ ಮಾಂಜಾ ದಾರದ ಬಳಕೆಯಿಂದ ಪಕ್ಷಿಗಳು, ಪ್ರಾಣಿಗಳು ಹಾಗೂ ಸಾರ್ವಜನಿಕರಿಗೆ ಉಂಟಾಗುವ ಅಪಾಯಗಳ ಕುರಿತು ಜಾಗೃತಿ ಮೂಡಿಸಿ ಅದರ ನಿಷೇಧಕ್ಕಾಗಿ ಜಿಲ್ಲಾಡಳಿತದ ಗಮನ ಸೆಳೆದಿರುವುದು ಅವರ ಸಾಮಾಜಿಕ ಕಳಕಳಿಯ ಮತ್ತೊಂದು ಮುಖವಾಗಿದೆ.

ಇಂದಿನ ಯುವಜನತೆಗೆ ಪ್ರೇರಣೆಯ ದೀಪ

ಇಂದು ಅನೇಕರು ಪರಿಸರದ ಬಗ್ಗೆ ಮಾತನಾಡುತ್ತಾರೆ. ಆದರೆ ಪರಿಸರಕ್ಕಾಗಿ ಬದುಕಿನ ಅಮೂಲ್ಯ ಸಮಯವನ್ನು ಮೀಸಲಿಟ್ಟು ನಿರಂತರ ಹೋರಾಟ ನಡೆಸುವವರು ವಿರಳ. ಅಂತಹ ಅಪರೂಪದ ವ್ಯಕ್ತಿತ್ವವೇ ಶ್ರೀ ಮುತ್ತಣ್ಣ ಭರಡಿ. ಅವರು ಕೇವಲ ಪರಿಸರ ಹೋರಾಟಗಾರರಲ್ಲ; ಜನಜಾಗೃತಿ ಮೂಡಿಸುವ ಮಾರ್ಗದರ್ಶಕ, ಕಲಾವಿದರ ಬೆಂಬಲಿಗ ಹಾಗೂ ಸಮಾಜದ ಒಳಿತಿಗಾಗಿ ಸದಾ ಚಿಂತಿಸುವ ಕರ್ಮಯೋಗಿ.

ಜನ್ಮದಿನದ ಶುಭ ಸಂದರ್ಭದಲ್ಲಿ...

ಜನ್ಮದಿನದ ಈ ಸುದಿನದಲ್ಲಿ ಶ್ರೀ ಮುತ್ತಣ್ಣ ಭರಡಿ ಅವರಿಗೆ ಹಾರ್ದಿಕ ಶುಭಾಶಯಗಳು.

ಅವರ ಪರಿಸರ ಸಂರಕ್ಷಣೆಯ ಸಂಕಲ್ಪ ಇನ್ನಷ್ಟು ವಿಸ್ತಾರವಾಗಲಿ, ಮಣ್ಣಿನ ಗಣೇಶ ಚಳವಳಿ ರಾಜ್ಯಾದ್ಯಂತ ಮತ್ತಷ್ಟು ಬಲ ಪಡೆಯಲಿ, ಸಮಾಜಮುಖಿ ಸೇವೆಯ ಪಯಣ ಹೊಸ ಎತ್ತರಗಳನ್ನು ತಲುಪಲಿ ಎಂಬುದು ಎಲ್ಲರ ಹಾರೈಕೆ.

"ಪ್ರಶಸ್ತಿಗಳು ವ್ಯಕ್ತಿಯನ್ನು ದೊಡ್ಡವನನ್ನಾಗಿಸುವುದಿಲ್ಲ; ವ್ಯಕ್ತಿಯ ಸೇವೆಯೇ ಪ್ರಶಸ್ತಿಗಳಿಗೆ ಮೌಲ್ಯ ತಂದುಕೊಡುತ್ತದೆ. ಆ ಮೌಲ್ಯವನ್ನು ತಮ್ಮ ಕಾರ್ಯಗಳ ಮೂಲಕ ಸಾಬೀತುಪಡಿಸಿರುವ ಅಪರೂಪದ ಪರಿಸರ ಹೋರಾಟಗಾರ ಶ್ರೀ ಮುತ್ತಣ್ಣ ಭರಡಿ."

ಜನ್ಮದಿನದ ಹಾರ್ದಿಕ ಶುಭಾಶಯಗಳು.

**ಮುತ್ತು ಗೋಸಲ**




## ಸುದೀರ್ಘ 15 ವರ್ಷಗಳ ಆದರ್ಶ ಸೇವೆಗೆ ಶಿಕ್ಷಕಿ ಬಿ.ಎಂ. ಪಾಟೀಲರಿಗೆ ಬೀಳ್ಕೊಡುಗೆ

ಅ.ಶ. ಸುದ್ದಿ ಮುದ್ದೇಬಿಹಾಳ

**ಗದಗ: ನಗರದ ಖಾನತೋಟ ವಿಭಾಗದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆ ನಂ. 2ರಲ್ಲಿ, ವರ್ಗಾವಣೆಗೊಂಡು ತೆರಳುತ್ತಿರುವ ಶಾಲೆಯ ಹಿರಿಯ ಶಿಕ್ಷಕಿ ಹಾಗೂ ಪ್ರಭಾರಿ ಮುಖ್ಯೋಪಾಧ್ಯಾಯಿನಿ ಬಿ.ಎಂ. ಪಾಟೀಲ ಅವರಿಗೆ ಶಾಲಾ ಕುಟುಂಬದ ವತಿಯಿಂದ ಆತ್ಮೀಯ,ಹಾಗೂ ಗೌರವಯುತ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು.**

ಸುಮಾರು 15 ವರ್ಷಗಳ ಕಾಲ ಶಾಲೆಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಬಿ.ಎಂ. ಪಾಟೀಲ ಅವರ ಶೈಕ್ಷಣಿಕ ಸಾಧನೆ, ಶಿಸ್ತು, ಕರ್ತವ್ಯನಿಷ್ಠೆ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ನೀಡಿದ ಅಪೂರ್ವ ಕೊಡುಗೆಯನ್ನು ಸ್ಮರಿಸಿ, ಗೌರವ ಸನ್ಮಾನ ಪತ್ರ ನೀಡಿ ಸತ್ಕ-ರಿಸಲಾಯಿತು. ಸಮಾರಂಭದಲ್ಲಿ ಶಿಕ್ಷಕರು, ಪಾಲಕರು ಹಾಗೂ ಗಣ್ಯರು ಅವರ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಶಿಕ್ಷಣ ಪ್ರೇಮಿ ಜಿ.ಎಸ್. ಹಿರೇಮಠ ಮಾತನಾಡಿ, "ಬಿ.ಎಂ. ಪಾಟೀಲ ಅವರು ಕೇವಲ ಶಿಕ್ಷಕಿಯಾಗಿರದೆ, ಪ್ರಭಾರಿ ಮುಖ್ಯೋಪಾಧ್ಯಾಯಿನಿಯಾಗಿ ಶಾಲೆಯ ಶೈಕ್ಷಣಿಕ ಗುಣಮಟ್ಟ, ಶಿಸ್ತು ಹಾಗೂ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಅವರ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆದ ನೂರಾರು ವಿದ್ಯಾರ್ಥಿಗಳು ಇಂದು ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಂಡಿದ್ದಾರೆ. ಅವರ ಸೇವೆ ಸದಾ ಸ್ಮರಣೀಯ," ಎಂದು ಪ್ರಶಂಸಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಿಕ್ಷಕರ ಸಂಘದ ಅಧ್ಯಕ್ಷ ಸಂಗಮೇಶ ಮಂಗಳಗುಡ್ಡ ಅವರು ಶಿಕ್ಷಕರ ಕರ್ತವ್ಯ, ಬದ್ಧತೆ ಹಾಗೂ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರದ ಕು-ರಿತು ಪ್ರೇರಣಾದಾಯಕವಾಗಿ ಮಾತನಾಡಿದರು. ಮತ್ತೋರ್ವ ಮುಖ್ಯ ಅತಿಥಿ ಮುತ್ತಣ್ಣ ಭರಡಿ ಅವರು ಬಿ.ಎಂ. ಪಾಟೀಲ ಅವರಿಗೆ ವಿಶೇಷ ಗೌರವ ಸನ್ಮಾನ ಪತ್ರ ನೀಡಿ ಅಭಿನಂದಿಸಿದರು.

ಬಳಿಕ ಮಾತನಾಡಿ, "15 ವರ್ಷಗಳ ಕಾಲ ಒಂದೇ ಶಾಲೆಯಲ್ಲಿ ಸೇವೆ ಸಲ್ಲಿಸಿ, ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಳಿಸಲಾಗದ ಗುರುತು ಮೂಡಿಸಿರುವ ಬಿ.ಎಂ. ಪಾಟೀಲ ಅವರ ಸರಳತೆ, ಸೇವಾ ಮನೋಭಾವ ಹಾಗೂ ಶಿಕ್ಷಣದ ಮೇಲಿನ ಬದ್ಧತೆ ಪ್ರತಿಯೊಬ್ಬ ಶಿಕ್ಷಕರಿಗೂ ಮಾದರಿಯಾಗಿದೆ. ಅವರು ನಡೆದಿರುವ ಆದರ್ಶದ ಹಾದಿ ಮುಂದಿನ ಪೀಳಿಗೆಯ ಶಿಕ್ಷಕರಿಗೆ ಪ್ರೇರಣೆಯಾಗಲಿ," ಎಂದು ಶುಭ ಹಾರೈಸಿದರು. ನಗರಸಭೆ ಸದಸ್ಯೆ ಫರ್ವಿನಾಬಾನು ಮುಲ್ಲಾ ಅವರು ಮಾತನಾಡಿ, "ಶಾಲೆಯ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಬಿ.ಎಂ. ಪಾಟೀಲ ಅವರ ಸೇವೆ ಅನನ್ಯವಾಗಿದೆ. ಅವರ ಕಾರ್ಯ ಎಲ್ಲರಿಗೂ ಮಾದರಿಯಾಗಿದೆ," ಎಂದು ಕೊಂಡಾಡಿದರು.



ಸನ್ಮಾನ ಸ್ವೀಕರಿಸಿ ಮಾತನಾಡಿದ ಬಿ.ಎಂ. ಪಾಟೀಲ ಅವರು ಭಾವುಕರಾಗಿ, "ಈ ಶಾಲೆಯಲ್ಲಿ ಕಳೆದ 15 ವರ್ಷಗಳು ನನ್ನ ಜೀವನದ ಅತ್ಯಂತ ಅಮೂಲ್ಯ ಮತ್ತು ಮರೆಯಲಾಗದ ಕ್ಷಣಗಳಾಗಿವೆ. ವಿದ್ಯಾರ್ಥಿಗಳು, ಸಹೋದ್ಯೋಗಿಗಳು, ಪಾಲಕರು ಹಾಗೂ ಶಾಲಾ ಕುಟುಂಬದಿಂದ ದೊರೆತ ಪ್ರೀತಿ, ವಿಶ್ವಾಸ ಮತ್ತು ಸಹಕಾರ ನನ್ನ ಬದುಕಿನ ದೊಡ್ಡ ಸಂಪತ್ತು. ಈ ಪ್ರೀತಿಯನ್ನು ಎಂದಿಗೂ ಮರೆಯುವುದಿಲ್ಲ," ಎಂದು ತಮ್ಮ ಭಾವನೆಗಳನ್ನು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಸಾಮಾಜಿ-ಕ ಕಾರ್ಯಕರ್ತರಾದ ಅಬ್ದುಲ್ ಮುನಾಫ್ ಮಲ್ಲಾ ಹಾಗೂ, ಎಸ್ ಡಿ ಎಮ್ ಸಿ ಸದಸ್ಯ ಚಾಂದಸಾಬ ಕೊಟ್ಟೂರ, ಸೇರಿದಂತೆ ಶಾಲೆಯ ಪ್ರಧಾನಗುರುಮಾತೆ ಎಸ್.ಎನ್. ಕಾಮತ, ಸಹ ಶಿಕ್ಷಕಿಯರಾದ ವಿ.ಎಂ. ಚಿರಂತಿಮಠ, ಎಸ್.ಜಿ. ಕಂಠಿ, ಅಡುಗೆ ಸಿಬ್ಬಂದಿ, ಶಾಲಾ ಸಿಬ್ಬಂದಿ, ಪಾಲಕರು ಹಾಗೂ ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಉಪಸ್ಥಿತ-ರಿದ್ದು, ಬಿ.ಎಂ. ಪಾಟೀಲ ಅವರ ಮುಂದಿನ ಸೇವಾ ಪಯಣ ಯಶಸ್ವಿಯಾಗಲೆಂದು ಹೃತ್ಪೂರ್ವಕ ಶುಭಾಶಯಗಳನ್ನು ಕೋರಿದರು. ಕಾರ್ಯಕ್ರಮವು ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಗಿ, ಒಬ್ಬ ಆದರ್ಶ ಶಿಕ್ಷಕಿಗೆ ಸಮಾಜ ಸಲ್ಲಿಸಿದ ಗೌರವದ ಪ್ರತೀಕವಾಗಿ ಎಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಿತು.

# ಹಿರಿಯ ಅಧಿಕಾರಿಗಳಿಗೆ ವಯೋನಿವೃತ್ತಿ ಬೀಳ್ಕೊಡುಗೆ:

ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಆರೋಗ್ಯ ಇಲಾಖೆಯಲ್ಲಿ ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾ-ರಿಗಳಾಗಿ ಸುದೀರ್ಘ ಹಾಗೂ ಶ್ಲಾಘನೀಯ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಮೂವರು ಹಿರಿಯ ಅಧಿಕಾರಿಗಳಿಗೆ ತಾಲೂಕು ಆರೋಗ್ಯ ಇಲಾಖೆ ಹಾಗೂ ಆನಂದಗೌಡರ ಗೆಳೆಯರ ಬಳಗದ ವತಿಯಿಂದ ಗೌರವಪೂರ್ವಕ ಬೀಳ್ಕೊಡುಗೆ ಸಮಾರಂಭ ಮಾಡಲಾಯಿತು.**

?ಸ್ಥಳೀಯ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯದಲ್ಲಿ ಜರುಗಿದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಆರೋಗ್ಯ ಅಧಿಕಾರಿ (ಟಿಎಚ್‌ಓ) ಡಾ. ಸತೀಶ್ ತಿವಾರಿ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಬೆಂಗಳೂರಿನ ಕ.ರಾ.ಸ.ಪ. ಬ್ಯಾಂಕುಗಳ ಮಹಾಮಂಡಳ ಹಾಗೂ ವಿಜಯಪುರದ ಜಿಒಸಿಸಿ (GOCC) ಬ್ಯಾಂಕಿನ ನಿರ್ದೇಶಕರಾದ ಆನಂದಗೌಡ




ಎನ್. ಬಿರಾದಾರ ಅವರು ನಿವೃತ್ತಿ ಹೊಂದಿದ ಅಧಿಕಾ-ರಿಗಳನ್ನು ಸನ್ಮಾನಿಸಿ ಮಾತನಾಡಿ, "ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ನಿವೃತ್ತ ಅಧಿಕಾರಿಗಳ ಸೇವೆ ಅನನ್ಯವಾದುದು. ಸುದೀರ್ಘ ಅವಧಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಿ ಮುನ್ನಡೆದ ಇವರ ನಿವೃತ್ತ ಜೀವನ ಸುಖಮಯವಾಗಿರಲಿ" ಎಂದು ಶುಭ ಹಾರೈಸಿದರು. ಮಡಿಕೇಶ್ವರ ಪ್ರಾಥಮಿಕ ಆರೋಗ್ಯ ಕೇಂದ್ರದ ಬಿ.ಜಿ. ಆಲಗುಂಡಿ, ಕಾಳಗಿ ಸಮುದಾಯ ಆರೋಗ್ಯ ಕೇಂದ್ರದ ಎ.ಕೆ. ಯರಂತಲಿಮಠ ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯದ ಐ.ಸಿ. ಮಾನಕರ ಅವರಿಗೆ ಇಲಾಖೆ ಹಾಗೂ ಗೆಳೆಯರ ಬಳಗದಿಂದ ಜಂಟಿಯಾಗಿ ಫಲಪುಷ್ಪ, ಸ್ಮರಣಿಕೆ ನೀಡಿ ಭಾವಪೂರ್ಣವಾಗಿ ಬೀಳ್ಕೊಡಲಾಯಿತು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿ ಸಾಧನೆ ಮಾಡಿದ ಆರೋಗ್ಯ ಇಲಾಖೆಯ ಸಿಬ್ಬಂದಿ ಯಲ್ಲಪ್ಪ ಚಲವಾದಿ ಅವರ ಸುಪುತ್ರ ಪರಶುರಾಮ ಚಲವಾದಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ವೈದ್ಯಾಧಿಕಾರಿಗಳಾದ ಡಾ. ಶ್ರೀಶೈಲ ಹುಕ್ಕೇರಿ, ಡಾ. ವಿಜಯಕುಮಾರ್ ಕಟಕದೊಂಡ, ಡಾ. ಬಸವರಾಜ್ ಆಲಗೂರು, ಡಾ. ಸಂಗಮೇಶ್ ದಶವಂತ್, ಡಾ. ಸುನಿಲ್ ಹಿರೇಗೌಡರ, ಡಾ. ತಹಸಿನ ಶಿವಣಗಿ ಉಪಸ್ಥಿತರಿದ್ದರು. ಇಲಾಖೆಯ ಪ್ರಮುಖ ಸಿಬ್ಬಂದಿಗಳಾದ ಅನುಸೂಯ ತೇರದಾಳ, ಟಿ.ಎಚ್. ಲಮಾಣಿ, ಸತೀಶ್ ಕುಲಕರ್ಣಿ, ಬಿ.ಎಸ್. ಶಿವಯೋಗಿಮಠ, ವಿಠ್ಠಲ್ ಕೀಲಾರಟ್ಟಿ, ಸಂತೋಷ ಅಂಗಡಗೇರಿ, ಯಲಗೂರೇಶ ತೊನಿಶ್ಯಾಳ, ಚೇತನ್ ಕಲ್ಲುಂಡಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಎಸ್. ಗೌಡರ ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದಿಸಿದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka